ಬೆಲೆ ರೂ.2.50 WPP No. SK/WPP/UDP/81/2012-2014
D.O.P - 15-12-2013 at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.
Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಜುಲೈ 2014

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-14 ಸಂಚಿಕೆ-7 ಪುಟಗಳು-8 Registered Under No.KA/SK/UDP/1260/2012-2014 Dated from 01-01-2012 to 31-12-2014.

## ಪ್ರಾತ: ಸ್ಮರಣೀಯ ದಿ। ಡಾ। ದಯಾನಂದ ಎಸ್ ರಾವ್


– ಕೆ.ವೇಣುಗೋಪಾಲ ರಾವ್

"Give me a fish. I will eat it for a day. Teach me fishing. I will eat for ever!!"

ನೀವು ನನಗೆ ಒಂದು ಮೀನು ಕೊಡುವುದಿದ್ದರೆ ನನಗದು ಬೇಡ. ಕೊಟ್ಟರೆ ನಾನದನ್ನು ಇಂದಿಗೆ ತಿಂದು ಮುಗಿಸುತ್ತೇನೆ. ಬದಲಿಗೆ ನನಗೆ ಮೀನು ಹಿಡಿಯಲು ಕಲಿಸಿ. ಅದರಿಂದ ನಾನು ಪ್ರತಿನಿತ್ಯ ಮೀನು ಪಡೆದುಕೊಳ್ಳುತ್ತೇನೆ- ಎನ್ನುತ್ತದೆ ಜಪಾನ್ ದೇಶದ ಗಾದೆ. ಭವ್ಯ ಭಾರತದಲ್ಲಿ ಎಷ್ಟು ಮಂದಿಗಿದೆ ಈ ಬುದ್ಧಿ?. ಇರುತ್ತಿದ್ದರೆ ಹುಟ್ಟಿಕೊಳ್ಳುತ್ತಿದ್ದರೇ ಲಕ್ಷ ಲಕ್ಷ ಭಿಕ್ಷುಕರು? ಭಿಕ್ಷುಕರ ನಗರಗಳು? ಲಕ್ಷ ಲಕ್ಷ ಮೋಸಗಾರರು? ಕಳ್ಳರು?. ಬೆಂಗಳೂರು ಮಹಾನಗರದಲ್ಲೊಂದು ಭಿಕ್ಷುಕರ ಬಡಾವಣೆಯೇ(Beggars Camp) ಇದೆ. ಅದು ಸದ್ಯೋಭವಿಷ್ಯದಲ್ಲಿ Vote Bank Area ಆಗಿ ಮಾರ್ಪಡುತ್ತದೆ. ಇದು ನಮ್ಮ ದೇಶದ ವಿಲಕ್ಷಣ ಸತ್ಯ.

ಪ್ರಪಂಚದೆಲ್ಲೆಡೆ ತುಂಬಿಕೊಂಡಿರುವ ಮಹಾಸ್ವಾರ್ಥಿಗಳು ನಿರಾಳವಾಗಿ ಉಪಯೋಗಿಸಿಕೊಂಡಿರುವ ದೊಡ್ಡ ಶಬ್ದ "ಸೇವೆ", "ಸಮಾಜ ಸೇವೆ". ರಾಷ್ಟ್ರ ನಿರ್ಮಾಣಕ್ಕಾಗಿ ಬಿಡುಗಡೆಯಾಗುವ ಕೋಟಿ ಕೋಟಿ ಹಣ ಪೋಲಾಗುವುದೇ ಇಲ್ಲಿ. ಅದರಿಂದ ಸಾವಿರಾರು ಕೋಟ್ಯಾಧೀಶರು ಹುಟ್ಟಿಕೊಳ್ಳುತ್ತಾರೆ. ಕೋಟಿ ಕೋಟಿ ಬಡವರು ಕೂಡ.

ಇದು ಹೀಗೆ ಎಂದು ಸಾರಾಸಗಟಾಗಿ ಹೇಳುವಂತಿಲ್ಲ. ಕಾರ್ಮೋಡಗಳ ಮಧ್ಯೆ ಅಪರೂಪದ ಕೋಲ್ಮಿಂಚು, ನಕ್ಷತ್ರ ಕಾಣಿಸುವ ಹಾಗೆ ಜನಸಾಗರದ ನಡುವೆ ಅಲ್ಲೊಬ್ಬ-ಇಲ್ಲೊಬ್ಬ ಪರಾರ್ಥವಾದಿಗಳು ಹುಟ್ಟಿ ಬರುತ್ತಾರೆ. ಅವರಿಗೆ ತಾವು- ತಮ್ಮ ಪರಿವಾರ ಇತರರಿಗಿಂತ ಮುಖ್ಯವಾಗುವುದಿಲ್ಲ. ಅಂತವರಲ್ಲೊಬ್ಬರು ನಮ್ಮ ಸಮಾಜದ ಪ್ರಾತ: ಸ್ಮರಣೀಯ ಮಹಾ ಚೇತನ ದಿ। ಡಾ। ದಯಾನಂದ ಎಸ್ ರಾವ್. ಇವರೊರ್ವ ವಿಜ್ಞಾನಿಯಾಗಿ, ತತ್ವಜ್ಞಾನಿಯಾಗಿ, ಕೊಡುಗೈದಾನಿಯಾಗಿ ಬಾಳಿದವರು. ಅವರೀಗ ನಮ್ಮ ಜೊತೆಗಿಲ್ಲ. ಪಂಚ ಭೂತಗಳಿಂದಾದ ಶರೀರ ಪಂಚಭೂತಗಳಲ್ಲಿ ಲೀನವಾಗಿದೆ. ಆದರೆ ಅವರ ದಿವ್ಯಾತ್ಮ ಸಾವಿರಾರು ವಿದ್ಯಾರ್ಥಿಗಳ ಹೃದಯದಲ್ಲಿ ಅನಂತವಾಗಿ ನೆಲೆಸಿದೆ. ಇದಕ್ಕೆ ಕಾರಣ ಅವರು ಅಂತರಾತ್ಮನನ್ನು ಪರರ ಹೃದಯದಲ್ಲಿ ಅರಸಿದ್ದು. ಡಾ।ದಯಾನಂದರಾಯರ ಬಗ್ಗೆ ಹಲವಾರು ಬಾರಿ ನಾವು ಓದಿದ್ದೇವೆ. ಮತ್ತೊಮ್ಮೆ ಓದಬೇಕೆಂದರೆ ಬೇಸರವಾಗುವುದಿಲ್ಲ. ಅಂತಹ ವ್ಯಕ್ತಿತ್ವ ಅವರದು.



ದಯಾನಂದರಾಯರು ಹುಟ್ಟಿದ್ದು ಮುಲ್ಕಿಯ ಸಮೀಪದ ಮಾಂಟ್ರಾಡಿಯಲ್ಲಿ; ಸಚ್ಚಿದಾನಂದ ರಾವ್ ದಂಪತಿಗಳ ಪುತ್ರನಾಗಿ. ಇಸವಿ 1929ರಲ್ಲಿ. ಹಿರಿಯರು ಮಾಡಿಟ್ಟ ಆಸ್ತಿ ಇದ್ದದ್ದು ಅಷ್ಟಕಷ್ಟೆ. ಆದರೆ ಇದು ಅವರ ಜ್ಞಾನದಾಹಕ್ಕೆ ಅಡ್ಡಿಯಾಗಲಿಲ್ಲ. ಚುರುಕುಮತಿಯಾಗಿದ್ದ ಬಾಲಕನಿಗೆ ವಿಜ್ಞಾನದಲ್ಲಿ ಅತೀವ ಆಸಕ್ತಿ. ಈ ಆಸಕ್ತಿಯೇ ಅವರನ್ನು ಪದವಿ ನಂತರ ಕೆಲಸಕ್ಕೆ ತೊಡಗಿಸಿಕೊಳ್ಳುವುದರಿಂದ ವಿಮುಖವಾಗಿಸಿದ್ದು. ಪದವಿ ಶಿಕ್ಷಣ ಮುಗಿಸಿದ ದಯಾನಂದರಾಯರು ಇಂಗಾಲ ಸಂಯುಕ್ತಗಳ ಸಾವಯವ ರಸಾಯನ ಶಾಸ್ತ್ರದಲ್ಲಿ ಸ್ನಾತ್ತಕೋತ್ತರ ಪದವಿ ಪಡೆದು, ಸಂಶೋಧನಾ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ ಗಳಿಸಿದರು. (Msc, PhD). ವ್ಯುತ್ಪನ್ನ ಮತಿಯಾದ ಅವರು ತಮ್ಮ ಪಾಂಡಿತ್ಯದಿಂದ ಗುರುತಿಸಲ್ಪಟ್ಟು ಅಮೆರಿಕನ್ ಕೆಮಿಕಲ್ ಸೊಸೈಟಿಯ ಪೆಟ್ರೋಲಿಯಂ ರಿಸರ್ಚ್ ಫಂಡ್‌ನ ನಿಯೋಜನೆಯಲ್ಲಿ ಯುನೈಟೆಡ್ ಸ್ಟೇಟ್ಸ್‌ಗೆ ಹೋಗಿ ಅಲ್ಲಿ 2 ವರ್ಷಗಳ ಅಧ್ಯಯನ ನಡೆಸಿದರು. ಅಲ್ಲಿಂದ ಅಮೆರಿಕಾದ ಪಿಟ್ಸ್‌ಬರ್ಗ್ ಯೂನಿವರ್ಸಿಟಿಯಲ್ಲಿ ರಸಾಯನ ಶಾಸ್ತ್ರ ವಿಭಾಗದಲ್ಲಿ ಅಧ್ಯಯನ ಮುಂದುವರಿಸಿದರು. 1963ರಲ್ಲಿ MBA ಪದವಿ ಮುಗಿಸಿ ಭಾರತಕ್ಕೆ ಮರಳಿ 1980ರವರೆಗೆ ಅಮರ್ ಡೈಕೆಮ್‌ಲಿ, ಮತ್ತು ಕಲರ್‌ಕೆಮ್‌ಲಿ ಕಂಪನಿಗಳಲ್ಲಿ ಉನ್ನತ ಅಧಿಕಾರಿಯಾಗಿ ಕೆಲಸ ಮಾಡಿದರು. 1981ರಲ್ಲಿ ತಮ್ಮದೇ ಆದ ರೆಮಿಡೆಕ್ಸ್ ಪ್ರೈ. ಲಿಮಿಟೆಡ್ ಕಂಪನಿಯನ್ನು ಆರಂಭಿಸಿ ಅದರ ಜೊತೆಗೆ 1990ರಲ್ಲಿ ಸನಿಲ್ ಫಾರ್ಮಾಸೂಟಿಕಲ್ಸ್ ಪ್ರೈ. ಲಿಮಿಟೆಡ್ ಹಾಗೂ 1995ರಲ್ಲಿ ಇಶಾನ್ ಲ್ಯಾಬ್ ಪ್ರೈ. ಲಿಮಿಟೆಡ್ ಸಂಸ್ಥೆಗಳನ್ನು ಆರಂಭಿಸಿದರು.

ಅವರ ಪ್ರೌಢಶಾಲಾ ಕಲಿಕೆ ಸಮಯದಲ್ಲಿ ಸಂಸ್ಕೃತ ಮೂರನೇ ಭಾಷೆಯಾಗಿತ್ತು. ನಂತರ ಸುಮಾರು 18 ವರ್ಷ ಸಂಸ್ಕೃತದ ಸಂಪರ್ಕ ತಪ್ಪಿ ಹೋಯಿತು. ಮತ್ತೆ ಸ್ವತ: ಅಭ್ಯಾಸ ಮಾಡಿ ಭಗವದ್ಗೀತೆ, ಉಪನಿಷತ್ತುಗಳನ್ನು ಮೂಲ ಸಂಸ್ಕೃತದಲ್ಲಿ ಓದಿ ಅರಿವು ಪಡೆದರು. ರಾಯರು ಭಾವಜೀವಿಯೂ ಆಗಿದ್ದು ಅದರಿಂದ ಸೃಷ್ಟಿಯಾಗಿದ್ದ ಸಾಹಿತ್ಯಕ್ಕೆ ಖ್ಯಾತ ಸಂಗೀತ ನಿರ್ದೇಶಕರ ನಿರ್ದೇಶನದಲ್ಲಿ ಹೆಸರಾಂತ ಗಾಯಕರ ಧ್ವನಿಯಲ್ಲಿ ಸಂಗೀತ ಒದಗಿಸಿ 14 ಧ್ವನಿ ಸುರುಳಿಗಳನ್ನೂ ಹೊರತಂದರು.

4ನೇ ಪುಟಕ್ಕೆ...

### ಹೆಬ್ಬೂರು ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳ ಚಾತುರ್ಮಾಸ್ಯ ಭೇಟಿಗೆ ಸಮಾಜಬಾಂಧವರಿಗೆ ಅವಕಾಶ

ತುಮಕೂರು ಹೆಬ್ಬೂರಿನ ಘನಪುರಿ ಸಂಸ್ಥಾನದ ಕೋದಂಡಾಶ್ರಮ ಮಠದ ಮಠಾಧೀಶ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರ ಚಾತುರ್ಮಾಸ್ಯ ಕಾಲದಲ್ಲಿ ಸಮಾಜ ಬಾಂಧವರು ಅವರ ಭೇಟಿಯ ಸಲುವಾಗಿ ದಿನಾಂಕ 19-07-2014ರಂದು ಶನಿವಾರ ರಾತ್ರಿ 8.30ಕ್ಕೆ ಉಡುಪಿಯ ಶಾರದಾ ಮಂಟಪದಿಂದ ಹೊರಟು ಪಡುಬಿದ್ರೆ, ಮಂಗಳೂರು ಮಾರ್ಗವಾಗಿ ಪ್ರಾತ:ಕಾಲ ಹೆಬ್ಬೂರಿಗೆ ತಲುಪುವುದು. ದಿನಾಂಕ 20ರಂದು ಭಾನುವಾರ ಶ್ರೀಗಳವರ ಭೇಟಿ ಮಾಡಿ ಪಾದಪೂಜೆ ಸಲ್ಲಿಸಿ ಫಲ ಮಂತ್ರಾಕ್ಷತೆ ಸ್ವೀಕರಿಸಿ ಅದೇ ದಿನ ಮಧ್ಯಾಹ್ನ ಹೊರಟು ರಾತ್ರಿ ಮರಳಿ ಬರುವುದೆಂದು ನಿರ್ಣಯಿಸಲಾಗಿದೆ. ಶ್ರೀ ಶ್ರೀಗಳ ಭೇಟಿ ಕಾರ್ಯಕ್ರಮಕ್ಕೆ ಆಗಮಿಸುವ ಸಮಾಜ ಬಾಂಧವರು ಈ ಕೆಳಗಿನವರನ್ನು ವೈಯಕ್ತಿಕವಾಗಿ ಅಥವಾ ದೂರವಾಣಿ ಮೂಲಕ ಸಂಪರ್ಕಿಸಲು ಕೋರಲಾಗಿದೆ.

1. ಮಂಗಳೂರು : ಶ್ರೀ ಕರುಣ್ ರಾವ್ ಬೆಳ್ಳೆ – 9243309120
2. ಪಡುಬಿದ್ರೆ : ಶ್ರೀ ಎಮ್ ಕೆ ದಿವಾಕರ್ ರಾವ್ – 9902169119
3. ಉಡುಪಿ : ಶ್ರೀ ಪ್ರಕಾಶ್ ರಾವ್ ಕೋಲ್ಪೆ – 9481267269

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ

ಮಹಿಳಾ ವೇದಿಕೆ

### ವರಮಹಾಲಕ್ಷ್ಮೀ ವ್ರತ

ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ವರಮಹಾಲಕ್ಷ್ಮೀವ್ರತ ಆಚರಣೆಯು ತಾ.08-08-2014ರಂದು ಶುಕ್ರವಾರ ಸಾಯಂಕಾಲ ಗಂಟೆ 4-30ಕ್ಕೆ ನೆರವೇರಲಿದೆ. ಭಾಗವಹಿಸುವ ಭಕ್ತ ಬಾಂಧವರು ಫಲಪುಷ್ಪ, ತುಳಸಿ, ವೀಳ್ಯ, ಕುಂಕುಮ, ಅರಸಿನ, ಸಣ್ಣ ಕಾಲುದೀಪ ಮೊದಲಾದ ಸಾಮಾಗ್ರಿಗಳೊಂದಿಗೆ (ಸಾಧ್ಯವಿದ್ದವರು ಮಧ್ಯಾಹ್ನ ಉಪವಾಸವಿದ್ದು) ಸಮಯಕ್ಕೆ ಸರಿಯಾಗಿ ಶ್ರೀ ಶಾರದಾ ಮಂಟಪಕ್ಕೆ ಆಗಮಿಸಿ, ಸಹಕರಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

ಶ್ರೀ ಶಾರದಾ ದೇವಸ್ಥಾನದಲ್ಲಿ ತಾ.12-09-2014ರಂದು ಸಾಮೂಹಿಕ ಹೂವಿನ ಪೂಜಾ ಕಾರ್ಯಕ್ರಮವು ನಡೆಯಲಿರುವುದು.

- ಅಧ್ಯಕ್ಷರು ಮತ್ತು ಸಂಚಾಲಕರು

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ

ಇದರ ಆಶ್ರಯದಲ್ಲಿ

### ಸೌರ ಋಗುಪಾಕರ್ಮವು

ತಾ.07-09-2014ರಂದು ಆದಿತ್ಯವಾರ ಶ್ರೀ ಶಾರದಾ ಮಂಟಪದಲ್ಲಿ ನಡೆಯಲಿದ್ದು ಬೆಳಿಗ್ಗೆ 9-30ರಿಂದ ಕಾರ್ಯಕ್ರಮವು ಪ್ರಾರಂಭವಾಗಲಿದೆ.

*ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಭಾಗವಹಿಸುವವರು ಹೂ, ತುಳಸಿ, ಹರಿವಾಣ, ಕೌಳಿಗೆಸೌಟನ್ನು ತರಬೇಕಾಗಿ ವಿನಂತಿ.*

- ಕಾರ್ಯದರ್ಶಿ

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ


ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಚಿಂತನ

ಪತ್ರಿಕೆಯೊಂದರ ವರದಿಯಲ್ಲಿದ್ದಂತೆ ವಿಧಾನ ಸಭಾ ಸದಸ್ಯರಾಗಿ ಆರಿಸಿ ಬಂದ ಮಹನೀಯರಲ್ಲಿ ಹಲವರ ಸಾಧನೆಗಳನ್ನು ಮೆಚ್ಚುವಂತಿದ್ದರೂ ಕೆಲವು ಶಾಸಕರು ಶೂನ್ಯ ಸಾಧನೆ ಮಾಡಿದ್ದಾರೆಂದು ಓದಿ ತಿಳಿದುಕೊಂಡಿರುತ್ತೇವೆ. ಜನರ ಬಳಿಗೆ ಹೋಗಿ, ಮತ ಕೇಳಿ ಬಹುಮತದೊಂದಿಗೆ ಐದು ವರ್ಷದ ಅವಧಿಗೆ ಆರಿಸಿ ಬಂದು ಜವಾಬ್ದಾರಿಯುಳ್ಳವರಾಗಿದ್ದು, ಕ್ಷೇತ್ರದ ಕೊರತೆ, ಸಮಸ್ಯೆ, ಅಭಿವೃದ್ಧಿಯ ಚಿಂತನೆ, ಜನಪರ ಕಾಳಜಿ ಮೊದಲಾದ ಬಗ್ಗೆ ಕಾಲ ಕಾಲಕ್ಕೆ ತಿಳಿದುಕೊಂಡು ಅದನ್ನು ಸರಕಾರದ, ಅಧಿಕಾರಿಗಳ, ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತರುವಂತೆ ಸದನದಲ್ಲಿ ಪ್ರಶ್ನಿಸುವುದು,ಭಾಷಣ ಮಾಡುವುದು ಮೊದಲಾದ ಚಟುವಟಿಕೆ ಗಳನ್ನು ಮಾಡಬೇಕಾದ ಈ ಶಾಸಕರು ಸದನದಲ್ಲಿ ಒಂದೂ ಪ್ರಶ್ನೆಯನ್ನೂ ಕೇಳದೆ, ಅದ್ಯಾವ ರೀತಿಯಲ್ಲಿ ತಮ್ಮ ಕ್ಷೇತ್ರದ ನಾಗರಿಕರಿಗೆ ನ್ಯಾಯ ದೊರಕಿಸಿ ಕೊಟ್ಟಾರು? ಹಾಗಿದ್ದಲ್ಲಿ ಇವರ ಕ್ಷೇತ್ರದಲ್ಲಿ ಯಾವೊಂದೂ ಸಮಸ್ಯೆಗಳಿಲ್ಲವೇ? ಕ್ಷೇತ್ರವು ಎಲ್ಲ ರೀತಿಯಲ್ಲೂ ಮುಂದು ವರಿದಿದೆಯೇ? ಇಲ್ಲಿಯ ಜನರೆಲ್ಲಾ ಇವರ ಈ ನಡವಳಿಕೆಯನ್ನು ಹೇಗೆ ತಾಳಿ ಕೊಂಡರು?

ಹೀಗೆ ಆರಿಸಿ ಬಂದ ಜನ ನಾಯಕರಲ್ಲಿ ಸಂಸದರಿಂದ ಹಿಡಿದು ಗ್ರಾಮ ಪಂಚಾಯತ್ ಸದಸ್ಯರವರೆಗೂ ಬೇರೆ ಬೇರೆ ಸ್ಥಳೀಯಾಡಳಿತದ ಸಂಸ್ಥೆಗಳ ಚುನಾಯಿತ ಸದಸ್ಯರೂ ತಮ್ಮ ಕ್ಷೇತ್ರದ ಬಗ್ಗೆ ತಿಳುವಳಿಕೆ ಪಡೆದುಕೊಂಡು ಜನರಿಗೆ ಬೇಕಾದ ಸವಲತ್ತುಗಳನ್ನು ಒದಗಿಸಲು ತಮಗೆ ಸಂಬಂಧಪಟ್ಟ ಸಭೆಗಳಲ್ಲಿ ಪ್ರಸ್ತಾವನೆ ಸಲ್ಲಿಸಿ ಸಭೆಯ ಅನುಮೋದನೆ ಪಡೆದುಕೊಂಡು ತಮ್ಮಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗಿಸಿ ಕೊಳ್ಳಬೇಕಾದುದೇ ಈ ಸದಸ್ಯರ ಬಹುಮುಖ್ಯ ಜವಾಬ್ದಾರಿ. ಇವರು ಹೀಗೆ ಮಾಡದಿದ್ದಾಗ ಜನರೇ ಪ್ರತಿಭಟಿಸಿ ಈತನನ್ನು ಎಚ್ಚರಿಸಬೇಕೇ? ಅಥವ ಈತನ ಸದಸ್ಯತನವೇ ರದ್ದಾಗುವಂತೆ ಕಾನೂನು ರೂಪಿಸಿಕೊಳ್ಳಬೇಕಾದುದು ಅನಿವಾರ್ಯವೇ? ಸ್ವಲ್ಪ ಯೋಚಿಸ ಬೇಕಾದುದು ಅಗತ್ಯ.

# ಕನ್ನಡ ಕವಿಕಾವ್ಯ ಪರಿಚಯ-೧೧ : ಮಹಾಕವಿ ಹರಿಹರ ದೇವ-ಹರಿದಾಸ



– ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

(ಕಳೆದ ಸಂಚಿಕೆಯಿಂದ)

ಹರಿಹರದೇವನ ಕೃತಿಗಳು :– ಪಂಪಾಶತಕ, ರಕ್ಷಾಶತಕ, ಶಿವಾಕ್ಷರ ಮಾಲೆ, ಮುಡಿಗೆಯ ಅಷ್ಟಕ, ಶಿವಗಣರ ರಗಳೆಗಳು– ಇವು ಹರಿಹರನ ಕೃತಿಗಳು. ಹಂಪೆಯ ವಿರೂಪಾಕ್ಷನ ಸುತ್ತಿಯೇ ಪಂಪಾಶತಕ ವಿರೂಪಾಕ್ಷನೇ ಪರದೈವವೆಂದು ಸಾರುವ ಕಾವ್ಯವೇ ಮುಡಿಗೆಯ ಅಷ್ಟಕ. ‘ರಘಟಾ’ ಎಂದು ಸಂಸ್ಕೃತದಲ್ಲಿ ಹೇಳಲ್ಪಡುವ ಛಂದಸ್ಸಿನ ಪ್ರಕಾರವೇ ಕನ್ನಡದಲ್ಲಿ ‘ರಗಳೆ’ ಎಂದಾಗಿದೆ. ಕತೆಯನ್ನು ವೇಗವಾಗಿ ಹೇಳಲು ಅನುಕೂಲವಾಗುವ ‘ಉತ್ಸಾಹ’ ಮತ್ತು ‘ಲಲಿತ’ ರಗಳೆಗಳನ್ನು ಹರಿಹರನು ಬಳಸಿಕೊಂಡು ಸುಮಾರು 125ಕ್ಕೂ ಹೆಚ್ಚಿನ ಕೃತಿಗಳನ್ನು ಈ ಛಂದಸ್ಸಿನಲ್ಲಿ ಬರೆದಿರುವನು. ಇಂತಹವುಗಳಲ್ಲಿ ಕೆಲವು– ಬಸವರಾಜ ದೇವರ ರಗಳೆ, ಪ್ರಭುದೇವರ ರಗಳೆ, ಪಿಂಡೋತ್ಪತ್ತಿ ರಗಳೆ, ಮಹಾದೇವಿ ಅಕ್ಕನ ರಗಳೆ, ಹಾವಿನ ಹಾಳ ಕಲ್ಲಯ್ಯನ ರಗಳೆ, ಕುಂಬಾರ ಗುಂಡಯ್ಯನ ರಗಳೆ, ಮಲುಹಣನ ರಗಳೆ, ಲಿಂಗಾರ್ಚನೆಯ ರಗಳೆ, ತಿರುನೀಲಕಂಠರ ರಗಳೆ, ಪುಷ್ಪರಗಳೆ, ಇಳೆಯಾಂಡ ಗುರಿಮಾರರ ರಗಳೆ, ಏಕಾಂತದ ರಾಮಯ್ಯನ ರಗಳೆ, ನಂಬಿಯಣ್ಣನ ರಗಳೆ, ಬೇಡರ ಕಣ್ಣಪ್ಪನ ರಗಳೆ, ಇಹ:ಪಗೆಯಾಂಡರ ರಗಳೆ, ಅಮರ ನೀತಿಗಳ ರಗಳೆ ಮುಂತಾದುವು ಪ್ರಮುಖವಾದುವು ತಮಿಳಿನಲ್ಲಿ ಶೇಕ್ಕಿಳಾರ್ ಮಹಾಕವಿಯ ‘ಪೆರಿಯಾ ಪುರಾಣ’ದಲ್ಲಿ 63 ಪುರಾತನರ ಚರಿತ್ರೆಗಳಿವೆ. ಇದರಿಂದಲೂ, ಸುರಂಗ ಕವಿಯ ತ್ರಿಷಷ್ಠಿ ಪುರಾತನರ ಚಾರಿತ್ರ ಇದರಿಂದಲೂ ಕತೆಗಳನ್ನು ತೆಗೆದು ಹರಿಹರನು ತನ್ನ ‘ರಗಳೆ’ ಕಾವ್ಯಗಳನ್ನು ಬರೆದಿರುವನು.

ಉತ್ಸಾಹ ರಗಳೆಗೆ ಉದಾಹರಣೆ :–

ದಶಭುಜಮಂ ದಿಕ್ತಟಕಂ ಪಸರಿಸಿ
ಎಸೆವ ಕರಂಗಳನೆತ್ತಲ್ ನೇಮಿಸಿ॥
ಒಂದು ಪದಂ ಪಾತಾಳವನೊತ್ತಲ್।
ಒಂದು ಪದಂ ಬ್ರಹ್ಮಾಂಡವನೆತ್ತಲ್।
ಆಡುದನಾಡಿದನಾಹಾ ಶಂಕರ।
ಆಡಿದನಾ ಗುಂಡನ ಮುಂದೀಶ್ವರ॥

**–ಕುಂಬಾರ ಗುಂಡಯ್ಯನ ರಗಳೆ.**

ಲಲಿತ ರಗಳೆಗೆ ಉದಾಹರಣೆ :–

ಇಂತಿರುತೆ ನಿತ್ಯಲಿಂಗಾರ್ಚನೆಗೆ ನಡೆತಂದು।
ಸಂತಸಂ ಬಡುತೆ ಹರನಾಲಯಕ್ಕೆ ತಂದು॥
ಕರಗುತೆ ವಿಭೂತಿಯ ಮನುದ್ಧೂಳಗಂ ಮಾಡಿ।
ಹರುಷದಿಂ ಪಾಡುತಂ ರುದ್ರಾಕ್ಷಿಯಂ ಸೂಡಿ॥
ಬರವರಲು ಮನನಾಗಿ ನಲವಿಂದೆ ನಿಂದಿರುತೆ।
ನಲಿದಕ್ಕರುಬ್ಬರಿಪ ಚರಣದಿಂದಡಿಯಿಡುತೆ॥

**–ತಿರುನೀಲಕಂಠರ ರಗಳೆ.**

ಬಸವರಾಜ ದೇವರ ರಗಳೆ ಮತ್ತು ನಂಬಿಯಣ್ಣನ ರಗಳೆ–ಇವುಗಳಲ್ಲಿ ಒಂದು ಸ್ಥಲ (ಆಶ್ವಾಸ) ಗದ್ಯವೂ ಒಂದು ಸ್ಥಲ ಪದ್ಯವೂ ಆಗಿದ್ದು ಓದಲು ವೈವಿಧ್ಯಮಯವಾಗಿದೆ.

ಗಿರಿಜಾ ಕಲ್ಯಾಣ ಪ್ರಬಂಧಂ :– ಹರಿಹರನು ಬರೆದ ‘ರಗಳೆ’ ಛಂದಸ್ಸಿನ ಕೃತಿಗಳನ್ನು ಪರಿಗಣಿಸಿ, ಇವನ ಔನ್ನತ್ಯವನ್ನು ಸಹಿಸದ ‘ಪರಸಮಯಿ’ ಗಳು ಇವನನ್ನು ‘ರಗಳೆ’ ಕವಿ ಎಂದು ಅಪಹಾಸ್ಯ ಮಾಡಿದರು. ಇದಕ್ಕಾಗಿಯೇ ಈತನು ಈ ಪ್ರೌಢ ಗ್ರಂಥವನ್ನು ಬರೆದನು.

(ಮುಂದುವರಿಯುವುದು...)

# ಯಾರಿವನು ಬಲ್ಲಿರಾ?

– ಪರ್ಜನ್ಯ.
(ಇದು ಸಾದಾರ ಲೇಖನ. ಆಧಾರ: ಕರ್ಮವೀರ ಸಂಪಾದಕೀಯ)

ಇದು ಬಿಸಿಲ್ಗುದುರೆಯನ್ನು, ಮರೀಚಿಕೆಯನ್ನು ಬೆನ್ನಟ್ಟಿ ಸವಾರಿ ಮಾಡುವ ಕಾಲ. ಅರ್ಹತೆ ಇಲ್ಲದಿದ್ದರೂ ಪ್ರಶಸ್ತಿ ಬಿರುದುಗಳ ದುರಾಸೆ. ಪ್ರಯತ್ನಪಟ್ಟು ಬೆನ್ನಟ್ಟಿ ಪ್ರಶಸ್ತಿ ಬಂದಾಗ ಅದರ ವೈಭವೀಕರಣ. ಅದಕ್ಕಾಗಿ ಸನ್ಮಾನ ಸಮಾರಂಭಗಳು. ಇದಕ್ಕೆ ಅಪವಾದವೆನ್ನುವ ಅಕ್ಷರಧಾರಿಗಳು ಬಹಳ ಕಡಿಮೆ.

ಹೊಗಳಿಸಿಕೊಳ್ಳುವುದು ಕೆಲವರಿಗೆ ಜನ್ಮಕ್ಕಂಟಿದ ಮಹಾಭಾಗ್ಯ. "ಹೊಗಳಿ ಹೊಗಳಿ ಎನ್ನ ಹೊನ್ನ ಶೂಲಕ್ಕೇರಿಸಿದರು; ಎನ್ನ ಹೊಗಳಿಕೆಯು ಮಾಣಾ ಕೂಡಲಸಂಗಮದೇವಾ" ಎಂದು ಹಲುಬಿದ್ದರು ಬಸವಣ್ಣ. 1970ರ ದಶಕದಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿ ತುರ್ತುಸ್ಥಿತಿ ಹೇರಿದಾಗ ಅದನ್ನು ವಿರೋಧಿಸಿ ತನಗೆ ಸಿಕ್ಕಿದ್ದ ಜ್ಞಾನಪೀಠ ಪ್ರಶಸ್ತಿಯನ್ನು ಹಿಂದಿರುಗಿಸಿದ್ದರು ದಿ। ಡಾಕ್ಟರ್ ಶಿವರಾಮ ಕಾರಂತರು.

ಇದೇ ವರ್ಗಕ್ಕೆ ಸೇರಿದವರು ಭಾರತೀಯ ಮೂಲದ ವೆಂಕಟರಾಮನ್ ರಾಮಕೃಷ್ಣನ್. ಅವರಿಗೆ ರಸಾಯನ ಶಾಸ್ತ್ರದ ನೊಬೆಲ್ ಪ್ರಶಸ್ತಿ ಸಿಕ್ಕಿತ್ತು. ಅವರ ಸಂದರ್ಶನ ಪಡೆಯಲು ಭಾರತೀಯ ಮಾಧ್ಯಮಗಳು ಮುಗಿಬಿದ್ದರು. ವೆಂಕಟರಾಮನ್ ಹೇಳಿದ್ದರು "ಬರೀ ನೋಬೆಲ್ ಬಂದುದಕ್ಕಾಗಿ ಸಂದರ್ಶನ ಮಾಡುವುದಿದ್ದರೆ ಬೇಡ. ರಿಬೋಸಮ್ ಕುರಿತು ನಾನು ಮಾಡುತ್ತಿರುವ ಸಂಶೋಧನೆಯ ಬಗ್ಗೆ ನಿಮಗೆ ಅರಿವಿದ್ದರೆ ಆ ಬಗ್ಗೆ ಮಾತನಾಡೋಣ" ಎಂದು ಮಾಧ್ಯಮದವರನ್ನೇ ದೂರಮಾಡಿದ್ದರು.

ಇದೆಲ್ಲವನ್ನೂ ಮೀರಿಸಿದ ಒಬ್ಬ ಮಹನೀಯನಿದ್ದಾನೆ. ಅವನೇ ಗ್ರಿಗೋರಿ ಫೆರೆಲ್‌ಮನ್. ಅವನೊಬ್ಬ ಯೆಹೂದಿ. ಜಗತ್ತು ಕಂಡ ಮಹಾ ಮ್ಯಾಥ್ಸ್(ಗಣಿತ) ಜೀನಿಯಸ್. ಹುಟ್ಟಿದ್ದು 1966ರ ಜೂನ್ 13ರಂದು. ಈತ ರಷ್ಯಾದ ಮಹಾಮೇಧಾವಿ ಗಣಿತಜ್ಞ. ಪಿಟೀಲು ನಿಪುಣ. ಟೆನ್ನಿಸ್ ಪ್ಲೇಯರ್. ಗಡ್ಡ ಬೋಳಿಸುತ್ತಿರಲಿಲ್ಲ. ಉಗುರುಗಳು ಉದ್ದಕ್ಕೆ ಬೆಳೆದು ಸುರುಳಿ ಸುತ್ತಿಕೊಂಡಿದ್ದುವು. ಆದರೂ ಉಗುರು ತೆಗೆಯುತ್ತಿರಲಿಲ್ಲ.

1970ರ ದಶಕದಲ್ಲಿ ಗಣಿತದ ಸ್ಪರ್ಧೆಗಳನ್ನೆಲ್ಲಾ ಗೆದ್ದ. 1982ರಲ್ಲಿ ಗಣಿತದ ಒಲಂಪಿಯಾಡ್‌ನಲ್ಲೂ ವಿಜಯಿಯಾಗಿದ್ದ. ವರ್ಷ 1904ರಲ್ಲಿ ಕೇಂಬ್ರಿಡ್ಜ್‌ನ ‘ಕ್ಲೇ ಮ್ಯಾಥಮ್ಯಾಟಿಕ್ಸ್ ಇನ್‌ಸ್ಟಿಟ್ಯೂಟ್’ ಜಗತ್ತಿನ ಏಳು ಕ್ಲಿಷ್ಟ ಗಣಿತ ಸಮಸ್ಯೆಯನ್ನು ಗುರುತಿಸಿ "ಯಾರಿಂದ ಸಾಧ್ಯವೋ ಅವರು ಈ ಸಮಸ್ಯೆಯನ್ನು ಬಿಡಿಸಿ" ಎಂದು ಬಹಿರಂಗ ಸವಾಲು ಒಡ್ಡಿತ್ತು. ಒಂದು ಶತಮಾನವಿಡೀ ಮೇಧಾವಿಗಳು ಪ್ರಯತ್ನಿಸಿದ್ದರೂ ಸಾಧ್ಯವಾಗಲೇ ಇಲ್ಲ. 2010ರಲ್ಲಿ ಫೆರೆಲ್‌ಮೆನ್ ಇದರಲ್ಲಿ ಒಂದನ್ನು ಬಿಡಿಸಿದ. ಅದಕ್ಕಿದ್ದ ಬಹುಮಾನ "ಮಿಲೆನಿಯಂ ಪ್ರೈಸ್ –ರೂ. 10 ಲಕ್ಷ ಅಮೆರಿಕನ್ ಡಾಲರ್."(ಸುಮಾರು 6 ಕೋಟಿ ರೂಪಾಯಿ.)

2003ರಲ್ಲಿ ಫೆರೆಲ್‌ಮೆನ್ "ಥರ್ಸ್ಟನ್ ಜಿಯೋಮೆಟ್ರೈಸೇಶನ್ ಕಂಡಕ್ಟರ್" ಎಂಬ ದೊಡ್ಡ ಗಣಿತ ಸಮಸ್ಯೆಯನ್ನು ಬಿಡಿಸಿದ. 2006ರಲ್ಲಿ ಅವನಿಗೆ ಗಣಿತ ಕ್ಷೇತ್ರದ ನೋಬೆಲ್ ಪುರಸ್ಕಾರಕ್ಕೆ ಸಮ ಎಂದು ಭಾವಿಸಲ್ಪಡುವ ಫೀಲ್ಡ್‌ಮೆಡಲ್ ಪ್ರಶಸ್ತಿಯನ್ನು ಘೋಷಿಸಲಾಯಿತು. ಈ ಎಲ್ಲ ಪ್ರಶಸ್ತಿಗಳನ್ನು ಗ್ರಿಗೋರಿ ಫೆರೆಲ್‌ಮನ್ "ತನಗೆ ಬೇಡವೇ ಬೇಡ" ಎಂದು ಸಾರಾಸಗಟಾಗಿ ನಿರಾಕರಿಸಿದ. "ಹಣ–ಹೆಸರು ಯಾವುದೂ ಬೇಡ. ಮೃಗಾಲಯದಲ್ಲಿ ಪ್ರದರ್ಶನಕ್ಕಿಟ್ಟ ಪ್ರಾಣಿಯ ಹಾಗೆ ಪ್ರದರ್ಶನವೂ ಇಷ್ಟವಿಲ್ಲ. ನನ್ನ ಕೆಲಸದ ಬಗ್ಗೆ ಮಾನ್ಯತೆ ಬೇಕಿಲ್ಲ" ಎಂದ. ಇದೆಂತಹ ಹುಚ್ಚಾಟ ಎನ್ನಬಹುದು ಯಾರಾದರೂ.

**"ನಮ್ಮಜ್ಜ ಮಹಾರಾಜನ ಆಸ್ಥಾನದಲ್ಲಿ ಕೆಲಸಕ್ಕಿದ್ದ. ಆದ್ದರಿಂದ ಆ ರಾಜನ ಆಸ್ತಿಯಲ್ಲಿ ನಮಗೂ ಪಾಲಿದೆ ಎಂದು ವಾದಿಸುವವರ ಎದುರಲ್ಲಿ ಇವನದೇನು ರಾದ್ಧಾಂತ ಎನ್ನುವಿರಾ?" ನಿಜ, "ಯಾರಿಗಾಗಿಯೂ ಏನೂ ಮಾಡದ ಆದರೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಅಜ್ಜ ನೆಟ್ಟ ಆಲದ ಮರದ ಬೀಳುಗಳನ್ನು ಹಿಡಿದು ನೇತಾಡುವವರ ಪಾಲಿಗೆ ಇವನೊಬ್ಬ ವಿಲಕ್ಷಣ ಹುಚ್ಚ."**

ಈ ಫೆರೆಲ್‌ಮೆನ್ ಈಗ ಗಣಿತ ಕ್ಷೇತ್ರದಿಂದಲೇ ದೂರಾಗಿದ್ದಾನೆ. ಗಣಿತ ಕ್ಷೇತ್ರದ ರಾಜಕೀಯ ಅವನಿಗೆ ಬೇಸರ ತಂದಿದೆಯಂತೆ. ವಿಶ್ವವಿದ್ಯಾಲಯದ ಕೆಲಸ ಬಿಟ್ಟು ಉದ್ದೇಶಪೂರ್ವಕವಾಗಿ ನಿರುದ್ಯೋಗಿಯಾಗಿ ಸ್ಯೆಂಟ್ ಪೀಟರ್ಸ್‌ಬರ್ಗ್‌ನಲ್ಲಿ ತನ್ನ ತಾಯಿಯ ಮನೆ ಸೇರಿಕೊಂಡಿದ್ದಾನೆ. ಮಾಧ್ಯಮಗಳನ್ನು ಹತ್ತಿರ ಬಿಡುತ್ತಿಲ್ಲ. ಇದಕ್ಕೇ ಹೇಳುವುದು ವಿಧಿ...! ಬಯಸಿ ಬಂದ ಭಾಗ್ಯ! ಅಲ್ಲವೇ?.

**ಇರಲಿ ಬಿಡಿ. ಅಂದ ಹಾಗೆ ಜಗತ್ತಿನ ಉಳಿದ ಆರು ಕ್ಲಿಷ್ಟ ಸಮಸ್ಯೆಗಳು ಇನ್ನೂ ಬಿಡಿಸಲು ಬಾಕಿಯಿದೆ. ನಮ್ಮಲ್ಲಿ ಯಾರಾದರೂ ಜೀನಿಯಸ್ ಹುಟ್ಟಿ ಈ ಪ್ರಶಸ್ತಿ ಗೆಲ್ಲುವಂತಾಗಲಿ ಎಂದು ಹಾರೈಸೋಣ.**

## WONDERFUL WOMEN

The moment you were born, there was a smile on her face. For her, you were the first ever gift she got by god's grace. For every stupid question of yours, she had an answer, she's a woman who enriched your mind, she's your mother. As you walk through your life, you meet a lady who understands you. Her truth, love and care for you is always true. She's you better half who walks with you throughout your life. She's a woman who enriched your heart, she's your wife. There appears an angel, who calls you dad. She makes you smile, even when you are sad. She is the only one in the world who can control your anger. She's a woman who enriched your soul, she's your daughter. These are the women who make your life perfect. It is the time for you men to show them a little more respect.

**-Pragathi Bhandi. Perdoor.**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎಸ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಶ್ರೀ ಪ್ರಫುಲ್ಲಚಂದ್ರರಾವ್ ಉಡುಪಿ, ಶ್ರೀ ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ

## 10ನೇ ತರಗತಿಯಲ್ಲಿ ಉತ್ಕೃಷ್ಟ ಶ್ರೇಣಿಯಲ್ಲಿ ತೇರ್ಗಡೆ



ಹೆಸರು : **ಶಶಾಂಕ್ ವಿ ರಾವ್**
ತಂದೆ : ಚೊಕ್ಕಾಡಿ ವಾದಿರಾಜ ರಾವ್
ತಾಯಿ : ಸುಕನ್ಯಾ ವಿ ರಾವ್
ವಿಳಾಸ : 'ಚಂದನ' ಚೊಕ್ಕಾಡಿ, ಕಟಪಾಡಿ, ಉಡುಪಿ ತಾ.
ಶಾಲೆ : ಟಿ ಎ ಪೈ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಕುಂಜಿಬೆಟ್ಟು ಉಡುಪಿ
ಅಂಕ : 570/625
ಶೇಕಡಾ : 91



ಹೆಸರು : **ಸುಮಂತ್ ಕುಮಾರ್ ಎಮ್**
ತಂದೆ : ಎಂ ಮಂಜುನಾಥ ರಾವ್
ತಾಯಿ : ಸುಜಾತಾ ಎಂ ರಾವ್
ವಿಳಾಸ : 'ಕಲ್ಪವೃಕ್ಷ' ವಡ್ಡರ್ಸೆ, ಬನ್ನಾಡಿ ಅಂಚೆ ಉಡುಪಿ ತಾಲೂಕು
ಕಾಲೇಜು: ವಿವೇಕ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಕೋಟ
ಅಂಕ : 577/625
ಶೇಕಡಾ : 92.32



ಹೆಸರು : **ಶರಣ್ಯ ಎನ್.**
ತಂದೆ : ಶ್ರೀ ಶರತ್ ಕುಮಾರ್ ನೆಲ್ಲಿಕುಂಜೆ
ತಾಯಿ : ಶ್ರೀಮತಿ ಸುಕನ್ಯಾ
ವಿಳಾಸ : C/o ಶ್ರೀ ಸುಬ್ಬರಾವ್ ನೆಲ್ಲಿಕುಂಜೆ
ಕಾಲೇಜು : ಶ್ರೀ ಸತ್ಯನಾರಾಯಣ ಪ್ರೌಢ ಶಾಲೆ ಪೆರ್ಲ (ಕೇರಳ)
ಗ್ರೇಡ್ : A+ (ಕೇರಳ ಎಸ್.ಎಸ್.ಎಲ್.ಸಿ ಬೋರ್ಡ್)

## ಪಿ.ಯು.ಸಿ.ಯಲ್ಲಿ ಉತ್ಕೃಷ್ಟ ಶ್ರೇಣಿಯಲ್ಲಿ ತೇರ್ಗಡೆ



ಹೆಸರು : **ರಕ್ಷಿತ್ ರಾಜ್**
ತಂದೆ : ರವೀಶ್ ಯಂ
ತಾಯಿ : ರಾಜೇಶ್ವರೀ ಸಿ
ವಿಳಾಸ : ಪುತ್ತೂರು ದಕ್ಷಿಣ ಕನ್ನಡ ಜಿಲ್ಲೆ
ಶಾಲೆ : ಎಕ್ಸ್‌ಪರ್ಟ್ ಪಿ ಯು ಕಾಲೇಜು.
ಅಂಕ : 579/600 (ವಿಜ್ಞಾನ)
ಶೇಕಡಾ : 96.5



ಹೆಸರು : **ರಂಜಿತಾ ಆರ್**
ತಂದೆ : ರಘುಪತಿ ರಾವ್
ತಾಯಿ : ಜಾನಕಿ ರಾವ್
ವಿಳಾಸ : 'ಕಿಟ್ಟಣ್ಣಯ್ಯ ನಿಲಯ' ಇನ್ನಂಜೆ, ಉಡುಪಿ ತಾಲೂಕು
ಕಾಲೇಜು: ಎಸ್ ವಿ ಎಚ್ ಪಿ ಯು ಕಾಲೇಜು ಇನ್ನಂಜೆ.
ಅಂಕ : 536/600 (ವಾಣಿಜ್ಯ)
ಶೇಕಡಾ : 89



ಹೆಸರು : **ಹರ್ಷಿತ ರಾವ್**
ತಂದೆ : ಹರಿಶ್ಚಂದ್ರ ರಾವ್
ತಾಯಿ : ವಂದನಾ ರಾವ್
ವಿಳಾಸ : ಐಡಿಯಲ್ ಸ್ಟುಡಿಯೋ, ಕಾರ್ಕಳ
ಕಾಲೇಜು : –
ಅಂಕ : 558/600
ಶೇಕಡಾ : 93.0



ಹೆಸರು : **ಸಂಜನ್ ರಾವ್**
ತಂದೆ : ಸಂತೋಷ್ ಕುಮಾರ್
ತಾಯಿ : ಶಾರದಾ
ವಿಳಾಸ : ಪೂನಾ, ಮಹಾರಾಷ್ಟ್ರ
ಶಾಲೆ : ಮಹಾರಾಷ್ಟ್ರ ಪಿ.ಯು.ಬೋರ್ಡ್
ಅಂಕ : – (ವಿಜ್ಞಾನ)
ಶೇಕಡಾ : 93



ಹೆಸರು : **ಚೇತನ್ ಹೆಬ್ಬಾರ್**
ತಂದೆ : ಕೆ. ಪರಮೇಶ್ವರ ಹೆಬ್ಬಾರ
ತಾಯಿ : ಶ್ರೀಮತಿ ಬಿ.ಕಮಲಾಕ್ಷಿ
ವಿಳಾಸ : ಕಬ್ಬಿನಾಲೆ, ಹೆಬ್ರಿ ಕಾರ್ಕಳ ತಾಲೂಕು
ಕಾಲೇಜು: ಎಸ್.ಆರ್. ಪಬ್ಲಿಕ್ ಪಿ.ಯು.ಕಾಲೇಜು, ಹೆಬ್ರಿ.
ಅಂಕ : 585/600 (ವಿಜ್ಞಾನ)
ಶೇಕಡಾ : 97.5%

### ಜೀವನ

ಹುಟ್ಟು ಸಾವಿನ ನಡುವಿನ ಅಂತರವೇ ಜೀವನ
ಹುಟ್ಟು ಅನಿಶ್ಚಿತ. ಸಾವು ನಿಶ್ಚಿತ.
ಜನನದ ಮೊದಲದ್ದ ನೆಲೆಯ ಅರಿವಿಲ್ಲ
ಮರಳಿದ ಬಳಿಕ ಸೇರುವ ತಾಣ ತಿಳಿದಿಲ್ಲ
ವರ್ತಮಾನ ಮಾತ್ರ ಸತ್ಯ
ಭೂತ ಭವಿಷ್ಯಗಳೆಲ್ಲಾ ಮಿಥ್ಯ
ಜೀವನವೆಂಬುದು ಬರಿಯ ನಾಟಕ ರಂಗ
ಪಾತ್ರ ಸರಿಯಾಗಿದ್ದಲ್ಲಿ ಜೀವನ ಸಾರ್ಥಕ

–ಶ್ರೀಮತಿ ಸೀತಾ ದೇವಿ ಭಾಸ್ಕರ್ ರಾವ್

### ವಿದೇಶ ಪ್ರಯಾಣ

ಕಾಸರಗೋಡು ಪೆರ್ಲದ ಪರಪ್ಪಕರಿಯ ನಿವಾಸಿಗಳಾದ ಶ್ರೀ ಸತ್ಯನಾರಾಯಣ ರಾವ್ ಮತ್ತು ಶ್ರೀಮತಿ ಸವಿತಾ ದಂಪತಿಗಳು ಅಮೇರಿಕಾದ ಪ್ಲೋರಿಡಾದಲ್ಲಿ ಉದ್ಯೋಗಿಯಾಗಿರುವ ತಮ್ಮ ಪುತ್ರ ಶ್ರೀ ಪ್ರಭಾಸ್ ಹಾಗೂ ಸೊಸೆ ಶ್ರೀಮತಿ ಮಾಯಾ ರೊಂದಿಗೆ ವಾಸ್ತವ್ಯಕ್ಕಾಗಿ ಇತ್ತೀಚೆಗೆ ವಿದೇಶ ಪ್ರಯಾಣಗೈದಿದ್ದಾರೆ.

## ವಚನ ಮಂದಾರ ರಾಜ್ಯ ಪುರಸ್ಕಾರ

ಬೆಂಗಳೂರಿನ "ಜ್ಞಾನ ಮಂದಾರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಕಾಡಮಿ" ವತಿಯಿಂದ ನಡೆದ 3ನೇ ವಚನ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನದಲ್ಲಿ ಕರ್ನಾಟಕದ ನಾಡು–ನುಡಿ–ಸಂಸ್ಕೃತಿಯಲ್ಲಿ ಗಣನೀಯವಾಗಿ ಸೇವೆ ಸಲ್ಲಿಸುತ್ತಿರುವ ಮಂಗಳೂರಿನ ಪ್ರೀತಿಕಾ ಹರ್ಷಕುಮಾರ್ ಇವರಿಗೆ "ವಚನ ಮಂದಾರ" ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಳೆದ ಜೂನ್ 1ರಂದು ಮಂಗಳೂರಿನ ಪುರ ಭವನದಲ್ಲಿ ನಡೆದ ಪ್ರಶಸ್ತಿ ವಿತರಣಾ ಕರ್ಯಕ್ರಮದಲ್ಲಿ ಗಣ್ಯರ ಉಪಸ್ಥಿತಿಯಲ್ಲಿ ಜ್ಞಾನ ಮಂದಾರ ಟ್ರಸ್ಟ್‌ನ ಮಹಾ ಪೋಷಕರಾದ ಡಾ। ಸಿ ಸೋಮಶೇಖರ್, ಐ ಎ ಎಸ್ ಪ್ರಶಸ್ತಿ ಪುರಸ್ಕಾರ ನೀಡಿದರು.

## ಅತ್ಯುತ್ತಮ ಜಿಲ್ಲಾಧ್ಯಕ್ಷೆ ಪ್ರಶಸ್ತಿ




ಮಂಗಳೂರು, ಕೊಡಗು, ಗೋವಾ ಮತ್ತು ಆಂಧ್ರಪ್ರದೇಶದ ಒಂದು ಭಾಗಗಳನ್ನೊಳಗೊಂಡ ಲಯನ್ಸ್ ಕ್ಲಬ್ ಇಂಟರ್‌ನೇಶನಲ್ ಜಿಲ್ಲೆಯ "SIGHT FIRST" ವಿಭಾಗದ "ಅತ್ಯುತ್ತಮ ಜಿಲ್ಲಾಧ್ಯಕ್ಷೆ" ಪ್ರಶಸ್ತಿಯನ್ನು ಮಂಗಳೂರಿನ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಇತ್ತೀಚೆಗೆ ಮಂಗಳೂರಿನ ಟಿ ವಿ ರಮಣ್ ಪೈ ಹಾಲ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಲಯನ್ಸ್ ಮಲ್ಟಿಪಲ್ ಕ್ಲಬ್ ಅಧ್ಯಕ್ಷ ಎಸ್ ರಾಮಚಂದ್ರರಿಂದ ಸ್ವೀಕರಿಸಿದರು.

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

*Krishna Rao*
Ph : 2520652
Mob. : 9902029048

**KISHAN**
**Studio & Video**
**Indoor Photography & Port Folio Photography, Video & Mixing, Lamination**
MAIN ROAD, MAJOOR & BANTAKAL.

**ಪ್ರೊ : ಸುಧಾಕರ್ ರಾವ್ ಬೆಳ್ಳೆ**

**ಶ್ರೀಮಾತಾ ಇಲೆಕ್ಟ್ರಾನಿಕ್ಸ್**

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

**ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103**
**ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093**

■...1ನೇ ಪುಟದಿಂದ

## ಪ್ರಾತ: ಸ್ಮರಣೀಯ ದಿ| ಡಾ| ದಯಾನಂದ ಎಸ್ ರಾವ್

ಈ ಭೂಮಿಯಲ್ಲಿ ಹುಟ್ಟಿದ ಯಾವುದೇ ಜೀವ ತನಗೆ ಜೀವನಾಧಾರವಾದ ಈ ಪ್ರಕೃತಿಗೆ ಏನನ್ನಾದರೂ ಕೊಡಬೇಕಂತೆ. ಸ್ವಾರ್ಥಿಗಳು ಈ ಸಮಾಜ ತನಗೆ ಏನನ್ನೂ ಕೊಟ್ಟಿಲ್ಲ. ಇನ್ನೂ ಇನ್ನೂ ಕೊಡಬೇಕು ಎಂದು ಹಂಬಲಿಸುತ್ತಾರೆ. ಆದರೆ ಪರಾರ್ಥಜೀವಿಗಳು ಈ ಸಮಾಜ ತನಗೇನು ಮಾಡಿದೆ ಎಂದು ಕೇಳದೆ ತಾನು ಸಮಾಜಕ್ಕಾಗಿ ಏನು ಮಾಡಲಿ ಎಂದು ಚಿಂತಿಸುತ್ತಾರೆ.

ಸ್ವಾರ್ಥಿಗಳು ತಾನು ಮತ್ತು ತನ್ನವರು ಎಂಬ ಸಂಕುಚಿತ ಲೋಕದಲ್ಲಿ ಕ್ರಿಮಿಕೀಟಗಳಂತೆ ವಿಹರಿಸುತ್ತಾರೆ. ಅಲ್ಲಿಗೇ ಅವರ ಅಮೂಲ್ಯ ಜೀವನ ಮುಗಿದು ಹೋಗುತ್ತದೆ. ಪರಾರ್ಥಿಗಳು ತಮಗಾಗಿ ಜೀವಿಸದೆ ಎಲ್ಲರ ಬಗ್ಗೆ ಚಿಂತಿಸುತ್ತಿರುತ್ತಾರೆ. ಅಂತವರು ತಮ್ಮ ಸುತ್ತ ಮುತ್ತ ಇರುವ ಎಲ್ಲರ ಹೃದಯದಲ್ಲಿ ಪರಮಾತ್ಮನನ್ನೇ ಕಾಣುತ್ತಾರೆ. ಈ ಸಾಲಿಗೆ ಸೇರಿದವರು ಡಾ| ದಯಾನಂದರಾಯರು.

ಒಬ್ಬೊಬ್ಬ ವ್ಯಕ್ತಿಯು ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ವಿದ್ಯಾರ್ಜನೆಯೇ ಸೋಪಾನ ಎಂಬ ಸತ್ಯವನ್ನು ಮನಗಂಡು ವಿದ್ಯಾರ್ಜನೆಗೆ ಮೊದಲ ಆದ್ಯತೆ ನೀಡಿದವರು ದಯಾನಂದರಾಯರು. "ನನಗೆ ಮೀನು ಹಿಡಿಯಲು ಕಲಿಸಿ" ಎಂಬ ಜಪಾನೀ ಗಾದೆಯ ತತ್ವವನ್ನು ಗೌರವಿಸಿದ ರಾಯರು ಸಮಾಜದ ವಿದ್ಯಾರ್ಥಿಗಳ ಸುಭದ್ರ ಭವಿಷ್ಯಕ್ಕೆ ವಿದ್ಯಾರ್ಜನೆಯೇ ಮೊದಲ ಮೆಟ್ಟಲು ಎಂದು ನಂಬಿದ್ದರು. ಯಾರಿಗಾದರೂ ಸಹಾಯ ಮಾಡುವಷ್ಟು ತಾನು ಶಕ್ತನಾದರೆ ನನ್ನ ಮೊದಲ ಆದ್ಯತೆ ವಿದ್ಯಾರ್ಜನೆಗೆ ಎಂಬ ಮಂತ್ರ ಅವರ ಬಾಳ ಜಪವಾಗಿತ್ತು. ಅದಕ್ಕಾಗಿ ಅವರು ಸ್ಥಾಪಿಸಿದ್ದು ತನ್ನಮ್ಮ ರತ್ನಾಬಾಯಿಯವರ ಹೆಸರಿನಲ್ಲಿ ಎಜ್ಯುಕೇಶನ್ ಟ್ರಸ್ಟ್.

ಸಮಾಜಸೇವೆ ಎಂಬ ಹೆಸರಿನಲ್ಲಿ ಉದ್ದುದ್ದ ಭಾಷಣಗಳನ್ನು ಕೇಳುವುದು ಈಗ ಸಾಮಾನ್ಯ. ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬಂದ ಹಿರಿಯರೊಬ್ಬರು ಹೇಳುತಿದ್ದರು. "ಹಣ ಮುಖ್ಯ; ಆದರೆ ಹಣವೇ ಮುಖ್ಯವಲ್ಲ; ಒಂದು ಹಂತದವರೆಗೆ ಹಣ ಸಂಗ್ರಹ ಬೇಕು; ಆದರೆ ಆ ಗುರಿ ದಾಟಿದ ನಂತರ ಹಣಕ್ಕೆ ಬೆಲೆಯಿಲ್ಲ. ಆ ಗುರಿ ದಾಟಿದ ನಂತರ ವ್ಯಕ್ತಿ ಸಮಾಜಮುಖಿಯಾಗಬೇಕು. ಅದರಿಂದ ಅವನು ಸುಖಿಯಾಗುತ್ತಾನೆ. ಶಾಶ್ವತನಾಗುತ್ತಾನೆ". ಎಂದರು. (ಸಭಿಕರಲ್ಲಿ ಹಿಂದಿನ ಸಾಲಿನವರೊಬ್ಬರು "ಈ ವ್ಯಕ್ತಿ ಅತಿಥಿಯಾಗಿ ಬಂದುದಕ್ಕೂ ಸಂಭಾವನೆ ಪಡೆಯುತ್ತಾನೆ" ಎಂದದ್ದು ಬೇರೆ ವಿಷಯ.)

ಡಾ| ದಯಾನಂದರಾಯರಂತೆ ವಿದ್ಯಾರ್ಜನೆ ಮತ್ತು ವಿದ್ಯಾರ್ಥಿವೇತನದ ಬಗ್ಗೆ ಬಹಳವಾದ ಕಾಳಜಿ ಇದ್ದ ಇನ್ನೊಬ್ಬ ವ್ಯಕ್ತಿ ನಮ್ಮ ಸಂಘದ ಅಧ್ಯಕ್ಷರಾಗಿ, ಗೌರವಾಧ್ಯಕ್ಷರಾಗಿ ಬಹಳಕಾಲ ಇದ್ದ ದಿ| ಅಂಬಲಪಾಡಿ ಕೃಷ್ಣರಾಯರು. ಬಡವರಿಗೆ ಸಂಘದಿಂದ ಸಹಾಯವಾಗಬೇಕು ಎಂಬ ವಿಷಯ ಬಂದಾಗ "ನಾವು ಮೊದಲು ಛಾತ್ರ ವೃತ್ತಿಗೆ ಆದ್ಯತೆ ನೀಡಬೇಕು" ಎನ್ನುತ್ತಿದ್ದರು. ಅವರ ಕಾಲದಲ್ಲಿಯೇ ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವಿದ್ಯಾರ್ಥಿವೇತನ ನಿಧಿ ಆರಂಭವಾದದ್ದು. ಇದಕ್ಕೆ ಒತ್ತಾಸೆಯಾಗಿ ನಿಂತವರು ಆಗ ಕಾರ್ಯದರ್ಶಿಯಾಗಿದ್ದ ಮತ್ತೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಶ್ರೀ ಎಂ.ಪಾಲಚಂದ್ರ ರಾಯರು. ಪಾಲಚಂದ್ರ ರಾಯರು ಕೃಷ್ಣರಾಯರ ವಿದ್ಯಾರ್ಥಿ ಪ್ರೇಮದ ಬಗ್ಗೆ ತಿಳಿದವರು. ಕೃಷ್ಣರಾಯರ ನಿಧನದ ನಂತರ ಸಂಘವು ಅವರ ಹೆಸರಿನಲ್ಲಿ ಶ್ರೀ ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರಶಸ್ತಿ ನಿಧಿಯನ್ನು ಸ್ಥಾಪಿಸಿ ಅದರ ಮೂಲಕ ಪದವಿ/ಸ್ನಾತ್ತಕೋತ್ತರ ಪದವಿಯಲ್ಲಿ ರ್‍ಯಾಂಕ್ ವಿಜೇತರಿಗೆ ಸನ್ಮಾನ ಮಾಡಲಾಗುತ್ತಿದೆ. ಆದರೆ ಅಭಿಮಾನಿಗಳಿಂದ ಈ ನಿಧಿಗೆ ಹರಿದು ಬಂದ ಕೊಡುಗೆ ಆಶಾದಾಯಕವಾಗಿಲ್ಲ ಎಂಬುದು ವಿಷಾದದ ವಿಚಾರ.

ಡಾ| ದಯಾನಂದರಾಯರು ವಿದ್ಯಾರ್ಥಿಗಳಿಗೆ ಉದಾರ ದೇಣಿಗೆ ನೀಡುವ ವಿಚಾರಕ್ಕೆ ಪರವಾಗಿರಲಿಲ್ಲ. ಬದಲು ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಸಾಲ ವಿದ್ಯಾರ್ಥಿವೇತನ ನೀಡಲು ಪ್ರೇರೇಪಿಸಿದರು. ಅದಕ್ಕೆ ನಮ್ಮ ಸಮಾಜದ ಬೇರೆ ಬೇರೆ ಊರಿನ ಸಂಘಟನೆಗಳಿಗೆ ಆರ್ಥಿಕ ಸಹಾಯ ನೀಡಿದರು. ವಿದ್ಯಾರ್ಥಿಗಳ ಶಿಕ್ಷಣ ಪೂರ್ಣವಾಗುವ ವರೆಗೆ ಯಾವುದೇ ಬಡ್ಡಿಯನ್ನು ಆಕರಿಸಬಾರದೆಂಬುದು ಸಾಲ ವಿದ್ಯಾರ್ಥಿ ವೇತನದ ಮೊದಲ ನಿಯಮ. ಬಡತನದ ಕಾರಣಕ್ಕೆ ವಿದ್ಯಾಭ್ಯಾಸ ನಿಲ್ಲಬಾರದು. ಕಲಿತು ಉದ್ಯೋಗ ಪಡೆದ ನಂತರ ಸಾಲದ ಮೊತ್ತವನ್ನು ಕಂತುಗಳಲ್ಲಿ (ಶಿಕ್ಷಣ ಮುಗಿದ ನಂತರದ ದಿನಗಳಲ್ಲಿ ಮಿತ ಬಡ್ಡಿಯೊಂದಿಗೆ) ಮರಳಿ ಪಡೆಯಬಹುದು ಎಂಬುದು ಅವರ ಉದ್ದೇಶವಾಗಿತ್ತು.

ವರ್ಷ 2006ರಿಂದ 2013-2014ರವರೆಗೆ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘಕ್ಕೆ ಒಟ್ಟು 27 ಲಕ್ಷ ರೂಪಾಯಿ ಮೊತ್ತವನ್ನು ಡಾ|ದಯಾನಂದ ಎಸ್ ರಾವ್ ಟ್ರಸ್ಟ್ ನೀಡಿದೆ. ಇದರಿಂದ 64 ವಿದ್ಯಾರ್ಥಿಗಳಿಗೆ ಒಟ್ಟು ರೂ.24 ಲಕ್ಷ ಸಾಲ ವಿದ್ಯಾರ್ಥಿವೇತನ ನೀಡಲಾಗಿದೆ. ಈ ವಿದ್ಯಾರ್ಥಿ ವೇತನ ಸಾಲವನ್ನು ಶ್ರೀ ಶಾರದಾ ಕ್ರೆಡಿಟ್ ಕೋ.ಅ.ಸೊಸ್ಯಾಟಿಯ ಮೂಲಕ ಕ್ಲಪ್ತ ಸಮಯದಲ್ಲಿ ನೀಡಲಾಗುತ್ತದೆ. ಇದಕ್ಕೆ ಸೊಸ್ಯಾಟಿಯ ಆಡಳಿತ ಮತ್ತು ಸಿಬ್ಬಂದಿವರ್ಗ ಸಂಪೂರ್ಣ ಸಹಕಾರ ನೀಡಿದೆ. ಸಾಲ ಪಡೆದುಕೊಂಡವರೆಲ್ಲಾ ಯೋಗ್ಯವಾಗಿ ಇದನ್ನು ಬಳಸಿಕೊಂಡು ಇಂಜಿನಿಯರ್‌ಗಳು, ಡಾಕ್ಟರ್‌ಗಳಾಗಿ ರೂಪುಗೊಂಡು ಉದ್ಯೋಗ ನಡೆಸುತ್ತಿದ್ದಾರೆ. ಇದು ನಮ್ಮ ಸಮಾಜದ ಬಗ್ಗೆ ಹೇಳಬೇಕಾದ ಅಭಿಮಾನದ ಮಾತು. ಅಷ್ಟೆ ಅಲ್ಲ ಸಾಲ ಪಡೆದುಕೊಂಡವರು "ಡಾ|ದಯಾನಂದ ರಾಯರಿಗೆ ಕೃತಜ್ಞತೆ ಸಲ್ಲಿಸಿ ಪತ್ರಗಳನ್ನೂ, ವಿದ್ಯಾರ್ಜನೆಯಲ್ಲಿ ಸಾಧಿಸಿದ ಪ್ರಗತಿಯ ವಿವರಗಳನ್ನು ಕಾಲ ಕಾಲಕ್ಕೆ ಸಲ್ಲಿಸಿದ್ದಾರೆ. ವರ್ಷ 2011ರವರೆಗೆ ಸಾಲ ಪಡೆದ ವಿದ್ಯಾರ್ಥಿಗಳೆಲ್ಲಾ ತಾವು ಪಡೆದ ಸಾಲವನ್ನು ಸಂಪೂರ್ಣವಾಗಿ ಮರು ಪಾವತಿ ಮಾಡಿದ್ದಲ್ಲದೆ ಆ ಹಣ ಮುಂದಿನ ವಿದ್ಯಾರ್ಥಿಗಳಿಗೆ ಸಿಗುವಲ್ಲಿ ಸಹಕರಿಸಿದ್ದಾರೆ.

ಎಲ್ಲೆಡೆ ಎಲ್ಲವೂ ಸರಿಯಾಗಿರುವುದಿಲ್ಲ- ಎಂಬ ಮಾತಿದೆ. ಹಾಗೇ ಬಡವರಿಗೆ ಎಂದಿದ್ದ ಈ ಸಾಲ ವಿದ್ಯಾರ್ಥಿ ವೇತನವನ್ನು ಸಾಕಷ್ಟು ಶಕ್ತರಾದವರೂ ಪಡೆದುಕೊಂಡ ನಿದರ್ಶನಗಳಿವೆ. ಗೊತ್ತಿಲ್ಲದ ಪ್ರಮಾದಗಳಿಗೆ ಕ್ಷಮೆ ಇರುತ್ತದೆ ಎಂದು ಭಾವಿಸಿದರೆ ಎಲ್ಲರಿಗೂ 'ಮಾನ'- ಅಲ್ಲವೇ?

ಸುಸಂಸ್ಕೃತಿಯನ್ನು ಸುಸಂಸ್ಕೃತಿಯೇ ಹಿಂಬಾಲಿಸುತ್ತದೆ ಎನ್ನುತ್ತದ್ದೆ ಆರ್ಷೇಯ ವಾಕ್ಯ. ವರ್ಷ 2012ರಲ್ಲಿ ಮಾನ್ಯ ದಯಾನಂದರಾಯರು ಶಿವೈಕ್ಯರಾದ ನಂತರ ಈ ವಿದ್ಯಾರ್ಥಿ ವೇತನ ಸವಲತ್ತು ಮುಂದುವರೆಯುವುದೇ ಎಂಬ ಪ್ರಶ್ನೆಯಿತ್ತು. ಅದು ಕೇವಲ ಊಹೆಯಾಗಿತ್ತು. ದಯಾನಂದ ರಾಯರ ಧರ್ಮಪತ್ನಿ ಶ್ರೀಮತಿ ಮೋಹಿನಿಯವರು ಈ ಸತ್ಸಂಪ್ರದಾಯವನ್ನು ಚ್ಯುತಿ ಇಲ್ಲದೆ ಮುಂದುವರಿಸಿದ್ದಾರೆ. ಪ್ರತಿ ವರ್ಷ ಈ ನಿಧಿಗೆ ದೇಣಿಗೆಯನ್ನು ಅವರು ನೀಡುತ್ತಿದ್ದಾರೆ. ಅವರ ಕುಟುಂಬಿಕರೆಲ್ಲರಿಗೆ ಹಾಗೂ ಸಂಸ್ಥೆಗಳಿಗೆ ತಾಯಿ ಶಾರದೆ ಪೂರ್ಣಾನುಗ್ರಹ ತೋರಲಿ ಎಂದು ಹಾರೈಸೋಣ.

ಡಾ| ದಯಾನಂದರಾಯರು ಮಾತ್ರವಲ್ಲ ಅವರ ಕುಟುಂಬವೇ ನೂರಾರು ವಿದ್ಯಾರ್ಥಿಗಳ ಪಾಲಿಗೆ ಪ್ರಾತ: ಸ್ಮರಣೀಯವೆನ್ನಿಸಿದೆ. ಹುಟ್ಟಿದ ವ್ಯಕ್ತಿ ಈ ಭೂಮಿಗೆ- ಪಂಚಭೂತಾವೃತವಾದ ಪ್ರಕೃತಿಗೆ ತೀರಿಸಬೇಕಾದ ಋಣವನ್ನು ಈ ಕುಟುಂಬದವರು ಮಿಗತೆಯಾಗಿಯೇ ತೀರಿಸಿದ್ದಾರೆ.

ಈ ನಿಧಿಯ ಪ್ರಯೋಜನ ಪಡೆದ ವಿದ್ಯಾರ್ಥಿಗಳಿಗೊಂದು ಸಣ್ಣ ಭಿನ್ನಹ. ಸಾಲ ಪಡೆದು ವಿದ್ಯಾವಂತರಾಗಿ ಚೆನ್ನಾಗಿ ಬಾಳುತ್ತಿರುವ ವಿದ್ಯಾರ್ಥಿಗಳು ಸಮಾಜದ ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗಾಗಿ ಏನನ್ನಾದರೂ ಮಾಡಿದರೆ ಡಾ| ದಯಾನಂದ ರಾವ್ ಕುಟುಂಬಕ್ಕೆ ನಿಜವಾಗಿ ಕೃತಜ್ಞತೆ ಸಲ್ಲಿಸಿದಂತಾಗುತ್ತದೆ.

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಸಾಲವಿದ್ಯಾರ್ಥಿವೇತನ ಪಡೆದವರ ವಿದ್ಯಾರ್ಜನೆಯ ಕಾಲದ(4ವರ್ಷ) ಬಡ್ಡಿಯನ್ನು ತಾನೇ ಸೊಸೈಟಿಗೆ ಪಾವತಿಸುತ್ತದೆ. ಅಲ್ಲದೆ ಪ್ರತಿ ವರ್ಷ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಒಟ್ಟು ಒಂದು ಲಕ್ಷ ರೂಪಾಯಿಗೂ ಮಿಕ್ಕ ಸಾಮಾನ್ಯ ವಿದ್ಯಾರ್ಥಿ ವೇತನವನ್ನು ನೀಡುತ್ತದೆ. ಇದರ ಪ್ರಯೋಜನ ಪಡೆದು ಉದ್ಯೋಗಸ್ಥರಾದ ವಿದ್ಯಾರ್ಥಿ ಬಂಧುಗಳು ಸಂಘದ ಈ ಸತ್ಕಾರ್ಯ ಮುಂದೆಯೂ ನಿರಂತರ ನಡೆಯುವಂತಾಗಲು ಸಂಘಕ್ಕೆ ಕಿಂಚಿತ್ ದಾನ ನೀಡುವಂತಾಗಲಿ ಎಂದು ಆಡಳಿತ ಮಂಡಳಿ ಹಾರೈಸುತ್ತದೆ.

**(ಈ ಲೇಖನ "ಪರಿಪರಿಜನ್ಯ"- ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿದ್ದು. ಸ್ಮರಣೆ: ಶ್ರೀ ವೈ. ಮೋಹನ್‌ರಾಯರ "ಶ್ರೀ ಶಾರದಾ" ಮಾರ್ಚ್ 2012ರ ಲೇಖನ.)**

## ಬಪ್ಪನಾಡು 'ಶ್ರೀನಿವಾಸ ಪದ್ಮಾವತಿ ಬಳಗ'ದ ವಂಶವೃಕ್ಷ ಪುಸ್ತಕದ ಬಿಡುಗಡೆ ಸಮಾರಂಭ



ಸಂಪ್ರದಾಯಬದ್ಧ ಹಾಗೂ ಗೌರವಾನ್ವಿತ 514 ಸದಸ್ಯರಿರುವ ಬಪ್ಪನಾಡು ಬಂಧು ಬಳಗದ ವಂಶವೃಕ್ಷದ ಪುಸ್ತಕ ಬಿಡುಗಡೆಯ ಸಮಾರಂಭ ಕೋಡಿಗೆಹಳ್ಳಿಯಲ್ಲಿರುವ ಜ್ಞಾನಶಕ್ತಿ ಮಂಟಪದಲ್ಲಿ ದಿನಾಂಕ 04-05-2014 ರಂದು ಸಡಗರ ಸಂಭ್ರಮದಿಂದ ಜರುಗಿತು. ಹೆಚ್ಚು ಕಡಿಮೆ ಬೆಂಗಳೂರಿನಲ್ಲಿರುವ ಬಪ್ಪನಾಡು ಬಂಧು ಬಳಗದ ಸದಸ್ಯರೆಲ್ಲರೂ ಈ ಸಂತೋಷದ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮವು ದೀಪ ಬೆಳಗಿಸುವುದರೊಂದಿಗೆ ಪ್ರಾರಂಭವಾಯಿತು. ನಂತರ ಕುಮಾರಿ ನಿವೇದಿತಾ ಹಾಗೂ ನಿಹಾರಿಕಾರವರು ಗಣಪತಿ ಪ್ರಾರ್ಥನೆಯನ್ನು ಮಾಡಿದರು. ದೇವಿ ಪ್ರಾರ್ಥನೆ ಕುಮಾರಿ ಸಹನಾ ಶಾಸ್ತ್ರಿಯವರು ಹಾಡಿದರು. ವಂಶವೃಕ್ಷದ ಪುಸ್ತಕ ಬಿಡುಗಡೆಯನ್ನು ಶ್ರೀ ಬಪ್ಪನಾಡು ಕೃಷ್ಣಮೂರ್ತಿರವರ ತಮ್ಮ ದಿವ್ಯಹಸ್ತದಿಂದ ನಡೆಸಿಕೊಟ್ಟರು, ಉಪಸ್ಥಿತರಿದ್ದ ಶ್ರೀ ಬಪ್ಪನಾಡು ಪ್ರಭಾಕರ್ ರಾವ್, ಶ್ರೀ ಪ್ರಭಾಕರ್ ವಾಸುದೇವ ರಾವ್ ಸಭೆಯಲ್ಲಿ ಸಂದರ್ಭೋಚಿತವಾಗಿ ಮಾತನಾಡಿದರು. ಶ್ರೀ ಸೀತಾರಾಮ ಬಿ. ವಿ.ರವರ ನೇತೃತ್ವದಲ್ಲಿ ಹಿರಿಯರಾದ ಡಾ| ಸುಬ್ರಹ್ಮಣ್ಯ ಶರ್ಮ, ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದ ಶ್ರೀ ಬಿ. ವಿ. ರಾಮಚಂದ್ರ ರಾವ್, ಶ್ರೀಮತಿ ಕಮಲಮ್ಮ ಬಾಸ್ಕರ್ ರಾವ್, ಶ್ರೀಮತಿ ಪ್ರಭಾವತಿ ಆನಂದ ರಾವ್, ಶ್ರೀ ಇನ್ನ ಹರಿಶ್ಚಂದ್ರ ರಾವ್, ಶ್ರೀಮತಿ ಸರೋಜ ಭೀಮರಾವ್, ಶ್ರೀಮತಿ ಸುಮಿತ್ರ ಎಸ್. ರಾವ್‌ರವರುಗಳನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅತ್ಯುನ್ನತ ಹುದ್ದೆಗೇರಿದ ಶ್ರೀಮತಿ ವಾಣಿ ಜೆ. ಶರ್ಮರವರನ್ನು ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಲಾಯಿತು. ನಂತರ ಮನೋರಂಜನೆ ಕಾರ್ಯಕಗಳನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಕುಮಾರಿ ಈಶಾ. ಎಸ್. ರಾವ್, ಕುಮಾರಿ ನಿವೇದಿತಾ. ವೈ. ರಾವ್, ಕುಮಾರಿ ನೀಹಾರಿಕಾ. ವೈ. ರಾವ್, ಕುಮಾರಿ ಸಹನಾ ಶಾಸ್ತ್ರಿ, ಶ್ರೀ ವಿಜಯ್ ಕುಮಾರ್ ರಾವ್, ಕುಮಾರಿ ಪ್ರೇಮಲತಾ ರಾವ್, ಶ್ರೀಮತಿ ವಿದ್ಯಾ. ವಿ. ರಾವ್, ಶ್ರೀಮತಿ ಗಾಯತ್ರಿ ಶಾಸ್ತ್ರಿ ಹಾಗೂ ಶ್ರೀ ಬಪ್ಪನಾಡು ಪ್ರಭಾಕರ್ ರಾವ್ ಮತ್ತು ಶ್ರೀ ಬಿ. ವಿ. ರಾಮಚಂದ್ರ ರಾವ್ ರವರು ಹಾಡುಗಳನ್ನು ಹಾಡಿದರು. ಇವರಿಗೆ ಪಾರಿತೋಷಕಗಳನ್ನು ಶ್ರೀಮತಿ ಪ್ರತಿಭಾ ಶಿವಕುಮಾರ್‌ರವರು ವಿತರಿಸಿದರು. ನಂತರ ಅಧ್ಯಕ್ಷರ ಭಾಷಣ ಮತ್ತು ವಂದನಾರ್ಪಣೆಯೊಂದಿಗೆ ಬೆಳಗಿನ ಕಾರ್ಯಕ್ರಮ ಮುಕ್ತಾಯವಾಯಿತು. ಭೋಜನದ ನಂತರ ಶರವೂರು ಸುಬ್ರಹ್ಮಣ್ಯ ರಾವ್ ಮತ್ತು ತಂಡದವರಿಂದ "ಮಹಿಶ ಮರ್ಧಿನಿ" ಪ್ರಸಂಗದ ಯಕ್ಷಗಾನ ಕಾರ್ಯಕ್ರಮವು ಪ್ರೇಕ್ಷಕರ ಮನ ಸೆಳೆಯಿತು. ನಂತರ ಲಘು ಉಪಾಹಾರದೊಂದಿಗೆ ಆಹ್ವಾನಿತರನ್ನು ಬೀಳ್ಕೊಡಲಾಯಿತು.

## ಗೃಹ ಪ್ರವೇಶ

ಶ್ರೀಮತಿ ವಿಂದ್ಯಾರಾವ್ ಮತ್ತು ಶ್ರೀ ಅಶೋಕ್‌ರಾವ್ ದಂಪತಿಗಳು ಉಡುಪಿ ಬೈಲೂರು ದೇವಸ್ಥಾನದ ಬಳಿ ನಿರ್ಮಿಸಿದ ನೂತನ ಗೃಹ "ಬೃಂದಾವನ"ದ ಪ್ರವೇಶೋತ್ಸವವನ್ನು ದಿನಾಂಕ 19-6-2014ರಂದು ನೆರವೇರಿಸಿದರು.

### ಅಕ್ಕರೆಯ ಅಕ್ಕ

ಅಕ್ಕಾ ನಿನಗೆ ಆಗುವುದಿಲ್ಲವೇ
ಅಕ್ಕರೆ ತಮ್ಮನ ನೆನಪು!
ನನ್ನನ್ನು ಮರೆತು ಮಾವನ ಮುಂದೆ
ಮಾಡುತ ಕುಳಿತೆ ಒನಪು
ಒಲ್ಲೆನೆಂದರೂ ಗಲ್ಲವ ಹಿಂಡುತ
ಕೊಡುತಲಿ ಇದ್ದೆ ಡಪ್ಪಿ
ಹಟವನು ಮಾಡಿ ಕಾಡಿದರೆ ನಾ
ಆಡಿಸುತ್ತಿದ್ದೆ ಅಪ್ಪಿ!
ಬೆನ್ನನು ತಟ್ಟಿ ಮಲಗಿಸುತ್ತಿದ್ದೆ
ಅನುದಿನ ಉಣಿಸುತ ಅನ್ನ
ಆಡುತಲಿದ್ದೆ ನನ್ನೊಂದಿಗೆ ನೀ
ತಟ್ಟುತ ಹರುಷದಿ ಬೆನ್ನ
ತಲೆಯನು ಬಾಚಿ ತಿಲಕವನ್ನಿಟ್ಟು
ತೊಡಿಸುತಲಿದ್ದೆ ಅಂಗಿ
ಜಡೆಯನ್ನೆಳೆದು ಕಾಡಿಬೇಡಿ ನಾ
ತೊಂದರೆ ಕೊಟ್ಟರು ನುಂಗಿ
ಸಕ್ಕರೆ ಹಾಲು ಅಕ್ಕರೆಯಿಂದ
ಕೊಡುತಲಿ ಇದ್ದೆ ಮುಚ್ಚಿ
ಕೆನ್ನೆಯ ಸವರಿ ಕುಡಿಸುತಲಿದ್ದೆ
ಒಲ್ಲೆನೆಂದರೂ ಚುಚ್ಚಿ
ಬೆಳ್ದಿಂಗಳನಲಿ ಕಥೆಯನು
ಹೇಳುತ ತಿನ್ನಿಸುತ್ತಿದ್ದೆ ತುತ್ತು
ನಿನ್ನನ್ನು ಹಾಗೆ ಹಿಡಿದರೇನಾ
ಕೊಡುತಲಿ ಇದ್ದೆ ಮುತ್ತು
ನನ್ನನ್ನು ಬಿಟ್ಟು ಅರೆಗಳಿಗಿರದೆ
ಆಡುತಲಿದ್ದೆ ಅಂದು
ಮಾವನ ಮೋಹದ ಜಾಲದಿ ಸಿಲುಕಿ
ಮರೆತು ಕುಳಿತೆಯಾ ಇಂದು!

–ಎಂ. ಗಣೇಶ್ ರಾವ್, ಬಾರಕೂರು.

### ಕರ್ಕಾಟಕ ಮಾಸದ ವಿಶೇಷ ದಿನಗಳು

| | |
|---|---|
| 16-07-2014 | ಕರ್ಕಾಟಕ ಸಂಕ್ರಮಣ ಪೂರ್ಣಿಮಾ |
| 20-07-2014 | ಪುಷ್ಯಾ ನಕ್ಷತ್ರಾರಂಭ |
| 22-07-2014 | ಸರ್ವೈಕಾದಶೀ |
| 24-07-2014 | ಪ್ರದೋಷಃ |
| 26-07-2014 | ಅಮವಾಸ್ಯಾ |
| 01-08-2014 | ನಾಗರ ಪಂಚಮಿ |
| 03-08-2014 | ಆಶ್ಲೇಷಾ ನಕ್ಷತ್ರಾರಂಭ |
| 07-08-2014 | ಸರ್ವೈಕಾದಶೀ |
| 08-08-2014 | ಪ್ರದೋಷಃ, ವರಮಹಾಲಕ್ಷ್ಮೀ ವ್ರತ |
| 10-08-2014 | ಪೂರ್ಣಿಮಾ, ಋಗುಪಾಕರ್ಮ |
| 13-08-2014 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-9.04ಕ್ಕೆ |
| 16-08-2014 | ಸಿಂಹ ಸಂಕ್ರಮಣ, ಮಘಾ ನಕ್ಷತ್ರಾರಂಭ |

## ನಿಧನ



### ನಾಗಪ್ಪಯ್ಯ ಕೂಡ್ಲಿ

ಬಾರಕೂರು ನಿವಾಸಿ ನಾಗಪ್ಪಯ್ಯ ಕೂಡ್ಲಿ ಯಾನೆ ಭೋಜರಾಯರು (85 ವರ್ಷ) ದಿನಾಂಕ 14-06-2014ರಂದು ಅಲ್ಪಕಾಲದ ಅಸೌಖ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ ಶ್ರೀಮತಿ ಗಿರಿಜಾ ಹಾಗೂ ಪುತ್ರ ಉಡುಪಿಯ ಯಕ್ಷಗಾನ ಕೇಂದ್ರದ ಗುರುಗಳಾದ ಶ್ರೀ ದೇವದಾಸ ಕೂಡ್ಲಿ ಸಹಿತ ಮೂವರು ಪುತ್ರರು ಮತ್ತು ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.



### ಶಾರದಾ ರಾವ್

ಕಾರ್ಕಳದಲ್ಲಿ ವಾಸ್ತವ್ಯದಲ್ಲಿದ್ದ ದಿ। ಮಾರ್ಪಳ್ಳಿ ರಘುರಾಮರಾಯರ ಧರ್ಮಪತ್ನಿ ಶಾರದಾ ರಾವ್ (77 ವರ್ಷ) ದಿನಾಂಕ 16-06-2014ರಂದು ಕಾರ್ಕಳದ ತಮ್ಮ ಪುತ್ರನ ಮನೆಯಲ್ಲಿ ನಿಧನರಾದರು. ಮೃತರು ಓರ್ವಪುತ್ರ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ನಾರಾವಿ ಮಠದಬೆಟ್ಟು ಪಿ ಸುಬ್ಬರಾಯರು

ನಾರಾವಿ ಮಠದಬೆಟ್ಟು ಪಿ ಸುಬ್ಬರಾಯರು ದಿನಾಂಕ 23-06-2014ರಂದು ನಿಧನ ರಾದರು. ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಎಮ್. ವೆಂಕಟೇಶ್ ಹೆಬ್ಬಾರ್ ಮರೂರು

ಎಮ್. ವೆಂಕಟೇಶ್ ಹೆಬ್ಬಾರ್ ಮರೂರು (83 ವರ್ಷ) ದಿನಾಂಕ 07-07-2014ರಂದು ಮರೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ | : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ: | ''ಸತ್ಸಂಗದವರಿಂದ ಭಜನೆ'' ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ: | ''ಸೌಂದರ್ಯಲಹರಿ ಪಾರಾಯಣ'' ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.13-08-2014) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.16-07-2014 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.08-08-2014 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಮಾಂಗಲ್ಯಂ ತಂತುನಾನೇನ ....

ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಪೂರ್ಣಿಮಾ ಮತ್ತು ಶ್ರೀ ಚಿತ್ರಾಪುರ ಜಗನ್ನಾಥ ರಾವ್ ಇವರ ಪುತ್ರ **ಶ್ರೇಯಸ್**ಹಾಗೂ ಬೆಳ್ತಂಗಡಿ ಕಿಲ್ಲೂರಿನ ಶ್ರೀಮತಿ ಸುಗುಣ ಮತ್ತು ಶ್ರೀ ಬಿ.ಕೆ. ರಾಜಶೇಖರ ರಾವ್ ಇವರ ಪುತ್ರಿ **ಪ್ರತೀಕ್ಷ**ಇವರ ವಿವಾಹವು ದಿನಾಂಕ 7-7-2014ರಂದು ಬೆಳ್ತಂಗಡಿಯ ಶ್ರೀ ಮಂಜುನಾಥೇಶ್ವರ ಕಲಾಭವನದಲ್ಲಿ ನೆರವೇರಿತು.

### ಪಾದೆಬೆಟ್ಟಿನಲ್ಲಿ

## ಅರ್ಚಕರ ವಸತಿಗೆ ಶಂಕುಸ್ಥಾಪನೆ

ಪಡುಬಿದ್ರಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಪ್ರಾತಃ ಮಧ್ಯಾಹ್ನ ಹಾಗೂ ಸಾಯಂಕಾಲದಲ್ಲಿ (ತ್ರಿಕಾಲ ಪೂಜೆ) ಪೂಜೆ ನಡೆಯುತ್ತಿದ್ದು, ಸುಮಾರು ಒಂದು ವರ್ಷದಿಂದ ಈ ಪೂಜಾ ಕಾರ್ಯವನ್ನು ಯಥೋಚಿತವಾಗಿ ವಿಧಿವತ್ತಾಗಿ ನಡೆಸುವರೇ ಅರ್ಚಕರೋರ್ವರನ್ನು ನೇಮಿಸಲಾಗಿದೆ. ಅರ್ಚಕರಾಗಿ ನಿಯುಕ್ತಿಗೊಂಡ ಶ್ರೀ ಗಣೇಶ್ ಭಟ್ಟರು ಪೂಜಾ ಕೈಂಕರ್ಯವನ್ನು ಶ್ರದ್ಧಾಭಕ್ತಿಯಿಂದ ಮಾಡಿಕೊಂಡು ಬರುತ್ತಿದ್ದು, ದೇವಸ್ಥಾನಕ್ಕೆ ಬರುವ ಭಕ್ತಾಧಿಗಳ ಇಷ್ಟಾರ್ಥದಂತೆ ಶ್ರೀ ದೇವರಿಗೆ ಪೂಜೆ ಸಲ್ಲಿಸುತ್ತಿದ್ದಾರೆ. ಭಕ್ತಾಧಿಗಳು ಇದರಿಂದ ತೃಪ್ತಿಗೊಂಡಿದ್ದಾರೆ.

ವರ್ಷ 2012ರಲ್ಲಿ ದೇವಸ್ಥಾನದ ಸುತ್ತು ಪೌಳಿಯ ಕೆಲಸ ಮುಗಿಸಿ ಬ್ರಹ್ಮಕುಂಭಾಭಿಷೇಕ ನೆರವೇರಿಸಲಾಗಿತ್ತು. ಆ ನಂತರ ಬಂದಿರುವ ಸದ್ರಿ ಅರ್ಚಕರು ದೇವಳದ ಸುತ್ತುಪೌಳಿಯಲ್ಲಿಯೇ ವಾಸ್ತವ್ಯದಲ್ಲಿದ್ದು ಅವರಿಗೆ ನೆಲಸಲು ಸೂಕ್ತ ವಸತಿ ಇಲ್ಲದ ಪ್ರಯುಕ್ತ ಇದೀಗ ಸುಮಾರು 6 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮನೆಯೊಂದನ್ನು ನಿರ್ಮಿಸಲು ದೇವಳದ ಆಡಳಿತ ಮಂಡಳಿಯು ನಿರ್ಣಯಿಸಿದೆ.

ಆ ಪ್ರಯುಕ್ತ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ದಿನಾಂಕ 30-06-2014 ರಂದು ಈ ವಸತಿ ಗೃಹಕ್ಕಾಗಿ ಶಂಕುಸ್ಥಾಪನಾ ಕಾರ್ಯಕ್ರಮದಲ್ಲಿ ಪಡುಬಿದ್ರಿ ಉದಯಾದ್ರಿ ಶ್ರೀ ಬಾಲಗಣಪತಿ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ಜಗದಾಭಿರಾಮ ಭಟ್ಟರು ಶಂಕುಸ್ಥಾಪನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಶ್ರೀ ದೇವಳದ ಮೊಕ್ತೇಸರರಾದ ಶ್ರೀ ಬಿ.ಜಯರಾಮ ರಾವ್, ಸ್ಥಾನಿಕ ಬ್ರಾಹ್ಮಣ ಸಮಾಜದ ಪ್ರಮುಖರಾದ



ಕರುಣಾಕರ ಬೆಳ್ಳೆ, ಎಮ್.ಕೆ. ದಿವಾಕರ್ ರಾವ್ ಪಡುಬಿದ್ರಿ, ಸುಧಾಕರ್ ಬೆಳ್ಳೆ, ಶ್ರೀನಿವಾಸ ಶರ್ಮ, ದೇವರಾಯ ಶರ್ಮ ಮತ್ತಿತರರು ಉಪಸ್ಥಿತರಿದ್ದರು. ಆರಂಭದ ದೇಣಿಗೆಯಾಗಿ ಶ್ರೀ ಜಯರಾಮರಾವ್ ರೂ.25,000 ಹಾಗೂ ಶ್ರೀ ಎಮ್.ಕೆ. ದಿವಾಕರ್ ರಾವ್ ರೂ.25,000 ದೇಣಿಗೆ ನೀಡಿದರು. ಸಮಾಜ ಬಾಂಧವರು ಹಾಗೂ ಸಮಾಜದ ಸಂಘ ಸಂಸ್ಥೆಗಳು ನೀಡುವ ಅಮೂಲ್ಯ ದೇಣಿಗೆಯಿಂದ ಈ ನಿರ್ಮಾಣ ಕಾರ್ಯ ಆದಷ್ಟು ಬೇಗ ನೆರವೇರಲಿ ಎಂದು ಶ್ರೀದೇವಳದ ಆಡಳಿತ ಮಂಡಳಿಯ ಗೌರವಾಧ್ಯಕ್ಷ ಶ್ರೀ ಕೊರಗಾಂವ್ ಸುಬ್ಬರಾಯರು ಶುಭ ಹಾರೈಸಿದರು.

**ಈ ಬಗ್ಗೆ ದೇಣಿಗೆ ನೀಡಬಯಸುವ ದಾನಿಗಳು ಈ ಕೆಳಗಿನ ದೂರವಾಣಿಯನ್ನು ಸಂಪರ್ಕಿಸ ಬೇಕಾಗಿ ವಿನಂತಿ. 9844545040, 9243309120, 9902169119, 9945933363**

## ನಗೆಹನಿ

1. ಹೆಂಡತಿ– ಏನ್ರಿ, ಎಲ್ಲಿ ಮಳೆಯಲ್ಲಿ ನೆನೆದುಕೊಂಡು ಒದ್ದೆಯಾಗಿ ಮನೆಗೆ ಬಂದ್ರೀ.
   ಗಂಡ– ಸಾಕು ಮಾಡೇ, ಈ ಕಲಿಯುಗದಲ್ಲೂ ಮಳೆ ಬರುವುದುಂಟೇ ನಾನು ಸೆಕೆಯಿಂದ ಬಿಸಿಲಿಗೆ ಬಂದು ಒದ್ದೆಯಾಗಿದ್ದರೆ ನಿನ್ನದು ಬೇರೇನೇ ಕತೆ.
2. ಆತ–ಹೌದಾ! ಆ ಮನೆಯಾತನಿಗೆ 12 ಜನ ಮಕ್ಕಳಂತೆ ಅವನ ಬಳ ಸರಕಾರದ ಕುಟುಂಬ ಯೋಜನೆಯವರು ಬರಲಿಲ್ಲವೇ
   ಈತ– ಬಂದಿದ್ದಾರೆ ಕಣೋ. ದೂರದಲ್ಲೇ ಇದು ಅಂಗನವಾಡಿ ಶಾಲೆಯಾಗಿರ ಬಹುದೆಂದು ತಿಳಿದು ಹಿಂದೆ ಹೋಗಿದ್ದಾರೆ.
3. ಆತ– ಹೌದಾ! ಮೇಸ್ಟ್ರೇ ನಿಮಗೆಷ್ಟು ಮಕ್ಕಳು
   ಮೇಷ್ಟ್ರು– ನನಗೆ 250 ಮಕ್ಕಳು.
   ಆತ–ಅದು ಹೇಗೆ ಸ್ವಾಮೀ, ತಮಾಷೆ ಮಾಡ್ತೀರಾ.
   ಮೇಷ್ಟ್ರು–ನಾನು ಕಲಿಸುವ ಕ್ಲಾಸಿನ ಮಕ್ಕಳೆಲ್ಲಾ ನನ್ನ ಮಕ್ಕಳಲ್ಲವೇ.

–ಪಿ.ಮೋಹನ್‌ದಾಸ್ ರಾವ್ ಮಂಗಳೂರು

# ವೈದ್ಯಕೀಯ ವೇದಿಕೆ-ಆರೋಗ್ಯ ಮಾಹಿತಿ



ಡಾ। ವೈ. ಸುದರ್ಶನ ರಾವ್

**ಆರೋಗ್ಯ ಮತ್ತು ಕುಡಿಯುವ ನೀರು**

ನಾವು ಆಮ್ಲಜನಕವಿಲ್ಲದೆ ಹೇಗೆ ಬದುಕಲಾರೆವೋ ಹಾಗೆಯೇ ನೀರಿಲ್ಲದೆಯೂ ಬದುಕಲಾರೆವು. ನಮ್ಮ ದೇಹದ ತೂಕದಲ್ಲಿ ಶೇಕಡಾ 65ರಷ್ಟು ಭಾಗ ನೀರೇ ಇರುವುದು. ಜೀವಕೋಶಗಳ ರಚನೆಗೆ, ವಿವಿಧ ಕಿಣ್ವಗಳ ಕೆಲಸಕ್ಕೆ, ರಕ್ತ ಪರಿಚಲನೆಗೆ, ನರಮಂಡಲದ ಚಟುವಟಿಕೆಗೆ, ಮಾಂಸಖಂಡಗಳ ಚಲನೆಗೆ, ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳಲಿಕ್ಕೆ, ತ್ಯಾಜ್ಯವಸ್ತುಗಳ ವಿಸರ್ಜನೆಗೆ ಹೀಗೆ ದೇಹದ ಪ್ರತಿಯೊಂದು ಅಂಗಕ್ಕೆ, ಅದರ ಕೆಲಸಕ್ಕೆ ಬೇಕೇಬೇಕಾದ ವಸ್ತು ನೀರು. ಒಬ್ಬ ಮನುಷ್ಯನಿಗೆ ದಿನಕ್ಕೆ ಸುಮಾರು ಮೂರು ಲೀಟರಿನಷ್ಟು ನೀರಿನ ಅಗತ್ಯವಿದೆ. ಹೀಗೆ ಬೇಕಾಗುವ ಮೂರು ಲೀಟರ್ ನೀರಿನಲ್ಲಿ ಸ್ವಲ್ಪ ನೀರು ದೇಹದಲ್ಲಿ ಉತ್ಪಾದನೆಯಾಗುತ್ತದಾದರೂ ಅಧಿಕಾಂಶ ಬಾಯಿಯ ಮೂಲಕ ಸೇವಿಸಿಯೇ ಬರಬೇಕು. ಈ ನೀರಿನೊಂದಿಗೆ ನಾವು ಅದರಲ್ಲಿ ಕರಗಿರುವ ದೇಹಕ್ಕೆ ಬೇಕಾದ ಪದಾರ್ಥಗಳಾದ ಕ್ಯಾಲ್ಸಿಯಂ, ಮ್ಯಾಂಗನೀಸ, ಸೆಲೆನಿಯಂ, ಸೋಡಿಯಂ, ಕ್ಲೋರೈಡ್, ಫ್ಲೋರೆಡ್ ಇತ್ಯಾದಿ ಲವಣಗಳನ್ನೂ ಸೇವಿಸುತ್ತೇವೆ. ಅದೇ ರೀತಿ ದೇಹಕ್ಕೆ ಬೇಡವಾದ ರಾಸಾಯನಿಕಗಳನ್ನೂ ಕ್ರಿಮಿಗಳನ್ನೂ ಸೇವಿಸುವ ಸಾಧ್ಯತೆಯೂ ಇದೆ. ಆದುದರಿಂದ ಸೇವಿಸಿದ ನೀರು ಆರೋಗ್ಯಕ್ಕೆ ಪೂರಕವಾಗಿಲ್ಲದಿದ್ದರೆ ಅನೇಕ ಖಾಯಿಲೆಗಳೂ ಸೇವಿಸಿದ ನೀರಿನಿಂದಾಗಿ ಬರುತ್ತವೆ. ಆರೋಗ್ಯವನ್ನು ಉಳಿಸಿಕೊಳ್ಳಲು ಶುದ್ಧ ನೀರನ್ನು ಸೇವಿಸುವುದು ಅತೀ ಅಗತ್ಯ.

ಶುದ್ಧವಲ್ಲದ ನೀರನ್ನು ಕಲುಷಿತವಾದ ನೀರೆಂದು ಕರೆಯುತ್ತೇವೆ. ಕಲುಷಿತವಾದ ನೀರೆಂದರೆ ನಮ್ಮ ದೇಹಕ್ಕೆ ಹಾನಿ ಮಾಡುವ ವಸ್ತುಗಳನ್ನು ಹೊಂದಿರುವ ನೀರು. ನಾವು ಕುಡಿಯುವ ನೀರನ್ನು ಕಲುಷಿತಗೊಳಿಸುವ ವಸ್ತುಗಳ ಪಟ್ಟಿಯಲ್ಲಿ ಮೊದಲನೆಯ ಸ್ಥಾನ ಪಡೆಯುವುದು ಕೆಸರು. ನಂತರದ ಸ್ಥಾನ ಪಾಚಿ, ಲಾರ್ವ ಹಾಗೂ ಸೈಕ್ಲೋಪ್ಸಗಳಂತಹಾ ನೀರಿನಲ್ಲಿರುವ ಸಣ್ಣಜೀವಿಗಳಿಗೆ. ಇವೆರಡು ಕಣ್ಣಿಗೆ ಗೋಚರವಾಗುವಂತವುಗಳಾದರೆ ಕೆಲವು ಲವಣಗಳು ಹಾಗೂ ರಾಸಾಯನಿಕಗಳು ಮತ್ತು ಮೀಣಿ ಜೀವಿಗಳು ಕುಡಿಯುವ ನೀರಿನಲ್ಲಿರುವುದನ್ನು ಶುದ್ದ ನೀರಿನಂತೆ ಕಂಡ ನೀರನ್ನು ಕುಡಿದು ಅದರ ಪರಿಣಾಮಗಳನ್ನು ಅನುಭವಿಸಿದ ನಂತರವೇ ಗೊತ್ತಾಗಬೇಕಷ್ಟೇ! ನೀರಿನಲ್ಲಿರುವ ಮೀಣಿಜೀವಿಗಳು ನಮ್ಮ ದೇಹವನ್ನು ಪ್ರವೇಶಿಸಿ ನಮ್ಮ ದೇಹದಲ್ಲಿ ಬೆಳೆಯುತ್ತವೆ. ಇದನ್ನು 'ಇನ್ಫೆಕ್ಷನ್' ಎಂದು ಕರೆಯುತ್ತೇವೆ. ನೀರಿನೊಂದಿಗೆ ಬಾಯಿಯ ಮೂಲಕ ಪ್ರವೇಶಿಸಿದ ಜೀವಿಗಳು ಜೀರ್ಣಾಂಗವ್ಯೂಹದಲ್ಲಿ ಬೆಳೆದು ಜೀರ್ಣಾಂಗವ್ಯೂಹದ ಖಾಯಿಲೆಗಳನ್ನೂ ತರಬಹುದು ಅಥವಾ ಜೀರ್ಣಾಂಗವ್ಯೂಹದಿಂದ ರಕ್ತವನ್ನು ಪ್ರವೇಶಿಸಿ ದೇಹದ ಬೇರೆ ಬೇರೆ ಅಂಗಗಳಿಗೆ ಹೋಗಿ ಬೇರೆ ಬೇರೆ ಅಂಗಗಳ ಖಾಯಿಲೆಗಳನ್ನು ತರಬಹುದು. ಕಾಲೆರಾ ಮತ್ತು ಡಿಸೆಂಟ್ರಿ, ಅಮೀಬಿಯಾಸಿಸ್, ಅನೇಕ ಹೊಟ್ಟೆ ಹುಳಗಳು (ಜೀರ್ಣಾಂಗವ್ಯೂಹದ ಖಾಯಿಲೆಗಳು), ವೈರಲ್ಹೆಪೆಟೈಟಿಸ್ (ಲಿವರ್ನ), ಪೋಲಿಯೊ (ನರಮಂಡಲದ), ಗಿನೀವರ್ಮ್ (ಕಾಲಿನಲ್ಲಿ ಗುಣವಾಗದ ತನ್ನಿಂತಾನಾಗೇ ಆದ ವ್ರಣ) ಹಾಗೆಯೇ ಟೈಫಾಯ್ಡ್ ಜ್ವರ ಮತ್ತು ಇಲಿಜ್ವರಗಳು ನೀರಿನಲ್ಲಿರುವ ಜೀವಿಗಳಿಂದ ನಮಗೆ ಬರುವ ರೋಗಗಳು. ಈ ಮೇಲೆ ಹೇಳಿದ ಖಾಯಿಲೆಯಿಂದ ನರಳುತ್ತಿರುವ ಮನುಷ್ಯ/ಪ್ರಾಣಿಯು ತನ್ನ ಮಲ ಹಾಗೂ ಮೂತ್ರ ಹಾಗೂ ವ್ರಣದಲ್ಲಿ ಈ ಮೀಣಿ ಜೀವಿಗಳ ಮರಿಗಳನ್ನು ವಿಸರ್ಜಿಸುತ್ತಾನೆ. ಈ ಮೀಣಿ ಜೀವಿಗಳ ಮರಿಗಳು ಕುಡಿಯುವ ನೀರನ್ನು ಸೇರಿಕೊಂಡು ಇನ್ನೊಂದು ಜೀವಿಯ ದೇಹವನ್ನು ಪ್ರವೇಶಿಸುವುದು ಈ ಮೀಣಿ ಜೀವಿಗಳ ಜೀವನ ಶೈಲಿಯಾಗಿದೆ.

ಕೈಗಾರಿಕೆಗಳಿಂದ ಹೊರಬಿಟ್ಟ ತ್ಯಾಜ್ಯ, ಕೀಟನಾಶಕಗಳು, ಗೊಬ್ಬರ, ಔಷಧಗಳು, ಬಣ್ಣಗಳು, ಪ್ಲಾಸ್ಟಿಕ್‌ಗೆ ಅನೇಕ ರಾಸಾಯನಿಕಗಳು ನಮ್ಮ ಕುಡಿಯುವ ನೀರಿನಲ್ಲಿ ಸೇರಿಕೊಳ್ಳಬಹುದು. ಈ ರಾಸಾಯನಿಕಗಳು ದೊಡ್ಡ ಪ್ರಮಾಣದಲ್ಲಿದ್ದರೆ ವಿಷವಾಗಿ ತಕ್ಷಣವೆ ದುಷ್ಪರಿಣಾಮ ಬೀರುತ್ತದೆ. ಸಣ್ಣ ಪ್ರಮಾಣದಲ್ಲಿದ್ದು ದಿನನಿತ್ಯ ಸೇವಿಸುತ್ತಿದ್ದರೆ ಮುಂದೆ ಕ್ಯಾನ್ಸರ್ ರೋಗವನ್ನು ತರುವ ಶಕ್ತಿಯನ್ನೂ ದೇಹದ ಮುಖ್ಯ ಅಂಗಗಳನ್ನು ಹಾಳುಮಾಡುವ ಶಕ್ತಿಯನ್ನೂ ಹೊಂದಿವೆ. ಹಾಗೆಯೇ ನ್ಯೂಕ್ಲಿಯರ್ ರಿಯಾಕ್ಟರ್‌ನ ವಿಕಿರಣಗಳಿಂದ ಕಲುಷಿತಗೊಂಡ ನೀರನ್ನು ಸೇವಿಸಿದರೆ ಮುಂದೆ ಕ್ಯಾನ್ಸರ್ ಬರುವ ಸಾಧ್ಯತೆ ಇರುತ್ತದೆ ಮಾತ್ರವಲ್ಲ ಇಂತಹಾ ನೀರನ್ನು ಸೇವಿಸಿದವರಿಗೆ ಹುಟ್ಟುವ ಮಕ್ಕಳು ಜನ್ಮತಃ ವಿಕಲಾಂಗರಾಗುವ ಸಾಧ್ಯತೆ ಇರುತ್ತದೆ.

ನಮಗೆ ನೀರು ಹೇಗೆ ದೊರೆಯುತ್ತದೆ? ನೀರನ್ನು ಕೃತಕವಾಗಿ ತಯಾರಿಸಿ ಬಳಸಿರುವುದು ನಗಣ್ಯ ಪ್ರಮಾಣದಲ್ಲಿದೆ. ಎಲ್ಲರೂ ಬಳಸುವುದು ಪ್ರಕೃತಿಯಲ್ಲಿ ದೊರಕುವ ನೀರನ್ನೆ. ಬಾಟಲಿಗಳಲ್ಲಿ ತುಂಬಿಸಿ ಮಾರುವ ನೀರು ಸಹಾ ಪ್ರಕೃತಿಯಲ್ಲಿ ದೊರೆತಿರುವ ನೀರೇ ಹೊರತು ಕೃತಕವಾಗಿ ತಯಾರಿಸಿದ್ದಲ್ಲ. ಪ್ರಕೃತಿಯಲ್ಲಿ ನೀರಿನ ಮುಖ್ಯವಾದ ಮೂಲವೆಂದರೆ ಮಳೆ. ಮೋಡವು ಘನೀಭವಿಸಿ ಮಳೆಯಾಗಿ ಆಕಾಶದಿಂದ ಸುರಿಯುವ ನೀರು ಅತ್ಯಂತ ಪರಿಶುದ್ಧವಾದುದು. ಆದರೆ ಅದು ಆಕಾಶದಿಂದ ಕೆಳಗೆ ಬೀಳುತ್ತಿದ್ದಂತೆ ಗಾಳಿಯಲ್ಲಿರುವ ಧೂಳು, ಕ್ರಿಮಿಗಳು, ಮೀಣಿ ಜೀವಿಗಳು, ರಾಸಾಯನಿಕಗಳೊಂದಿಗೆ ಮಿಳಿತಗೊಂಡು ನೆಲಕ್ಕೆ ಬೀಳುವಷ್ಟರಲ್ಲಿ ಸಾಕಷ್ಟು ಕಲುಷಿತವಾಗುತ್ತದೆ. ಹೀಗೆ ನೆಲಕ್ಕೆ ಬಿದ್ದ ನೀರು ಮಣ್ಣಿನ ಮೇಲೆ ಹರಿದು ಕೆರೆ ಹೊಳೆ ನದಿಗಳಿಗೆ ಸೇರುವಾಗ ಇನ್ನಷ್ಟು ಮಣ್ಣು ಕೆಸರು ಮಲ ಮೂತ್ರಾದಿ ಕಶ್ಮಲಗಳನ್ನು ತನ್ನಲ್ಲಿ ಸೇರಿಸಿಕೊಂಡು ಇನ್ನಷ್ಟು ಕಲುಷಿತವಾಗುತ್ತದೆ. ಹಾಗಾಗಿ ಕೆರೆ ನದಿಗಳಲ್ಲಿರುವ ನೀರನ್ನು ಅತ್ಯಂತ ಕಲುಷಿತ ನೀರೆಂದು ಪರಿಗಣಿಸಬೇಕು.

ಭೂಮಿಯ ಪದರಿನ ಒಳಗೆ ಆಳಕ್ಕೆ ಅಗೆದು ಕೂಡ ನೀರನ್ನು (ಬಾವಿಯ ನೀರು ಹಾಗೂ ಬೋರ್ವೆಲ್‌ನ ನೀರು)ಪಡೆಯಬಹುದು. ಕೆಲವೊಂದು ಕಡೆ ಭೂಮಿಯ ಪದರಿನಲ್ಲಿರುವ ನೀರು ಒತ್ತಡದಲ್ಲಿ ಚಿಲುಮೆಯಾಗಿ ಚಿಮ್ಮುವುದುಂಟು. ಹೀಗೆ ಭೂಮಿಯ ಪದರಿನಲ್ಲಿ ದೊರಕುವ ನೀರು ಶುದ್ಧವಾಗಿರುತ್ತದೆ. ಅದರಲ್ಲೂ ಬೋರ್ವೆಲ್ಲಿನ ನೀರು ಇನ್ನೂ ಶುದ್ಧವಾಗಿರುತ್ತದೆ. ಆದರೂ ಬಾವಿಯ ಸುತ್ತ ಆವರಣ ಗೋಡೆಯಿಲ್ಲದಿದ್ದರೆ ಇದೂ ನದಿಯ ನೀರಿನ ಹಾಗೆ ಕಲಷಿತಗೊಳ್ಳುವ ಸಾಧ್ಯತೆಗಳಿವೆ.

ಕೆರೆ ನದಿ ಬಾವಿಗಳ ಸುತ್ತಮುತ್ತ ಮಲಮೂತ್ರ ವಿಸರ್ಜಿಸುವುದು, ಸ್ನಾನ ಮಾಡುವುದು, ವಾಹನ ತೊಳೆಯುವುದು, ಬಟ್ಟೆ ತೊಳೆಯುವುದು, ಊರಿನ ಕೈಗಾರಿಕೆಗಳ ತ್ಯಾಜ್ಯವನ್ನು ಅದಕ್ಕೆ ಬಿಡುವುದು ಇವೆಲ್ಲಾ ಕುಡಿಯುವ ನೀರನ್ನು ಕಲುಷಿತ ಗೊಳಿಸುವ ನಮ್ಮ ಹಾಗೂ ಸಮಾಜದ ತಪ್ಪು ನಡವಳಿಕೆಗಳು. ನಮ್ಮ ನೀರಿನ ಮೂಲಗಳನ್ನು ಶುದ್ಧವಾಗಿಡುವುದು ನಮಗೆಲ್ಲರಿಗೂ ಒಂದು ಸಾಮಾಜಿಕ ಬದ್ಧತೆಯಾಗಿದೆ. ಕುಡಿಯುವ ನೀರಿನ ಮೂಲಗಳ ಹತ್ತಿರವೆಂದೂ ಮಲಮೂತ್ರ ವಿಸರ್ಜಿಸುವುದಾಗಲಿ, ಬಟ್ಟೆ ವಾಹನ ತೊಳೆಯುವುದಾಗಲಿ, ಸ್ನಾನಮಾಡುವುದಾಗಲಿ, ಈಜುವುದಾಗಲಿ ಮಾಡಬಾರದು. ಪಾಯಿಖಾನೆಗಳು ನೀರಿನ ಮೂಲದಿಂದ ಕನಿಷ್ಟ ಐವತ್ತುಮೀಟರನಷ್ಟಾದರೂ ದೂರವಿರಬೇಕು. ತ್ಯಾಜ್ಯಗಳನ್ನು ನೀರಿಗೆ ಬಿಡಬಾರದು. ಬಿಟ್ಟರೂ ಈ ತ್ಯಾಜ್ಯಗಳನ್ನು ಶುದ್ಧೀಕರಣ ಸ್ಥಾವರದಲ್ಲಿ ಶುದ್ಧೀಕರಿಸಿದ ನಂತರವೇ ಬಿಡಬೇಕು. ಬಾವಿಕೆರೆಗಳಿಗೆ ಮಳೆನೀರು ನೇರವಾಗಿ ಸೇರದಂತೆ ಆವರಣಗೋಡೆ ಕಟ್ಟಬೇಕು

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

# ಮೂಡಬಿದ್ರಿ ಸಂಘದ ವಾರ್ಷಿಕ ಮಹಾಸಭೆ



ಇತ್ತೀಚೆಗೆ ಶ್ರೀ ಆದಿಶಂಕರ ಬ್ರಾಹ್ಮಣ ಪರಿಷತ್ ಮೂಡಬಿದ್ರಿ ಇದರ ವಾರ್ಷಿಕ ಮಹಾಸಭೆಯು ಬೆಳುವಾಯಿ ದೇವಾನಂದ ಭಟ್ ಇವರ ಅಧ್ಯಕ್ಷತೆಯಲ್ಲಿ ಸಮಾಜಮಂದಿರ ಸಭಾಭವನದಲ್ಲಿ ಜರಗಿತು.

ಸಂಪನ್ಮೂಲ ವ್ಯಕ್ತಿಯಾಗಿ ಪಡುಬಿದ್ರಿ ಸಂಘದ ಅಧ್ಯಕ್ಷರಾದ ಶ್ರೀ ಎಮ್.ಕೆ. ದಿವಾಕರ ರಾವ್ ಭಾಗವಹಿಸಿ ಸಮಾಜದ ಏಳಿಗೆಗೆ ಗುರುಗಳ ಆಶೀರ್ವಾದ ಮುಖ್ಯ. ವರ್ಷಕ್ಕೊಮ್ಮೆ ಸಮಾಜ ಬಾಂಧವರು ನಮ್ಮ ಗುರುಮಠ ಶೃಂಗೇರಿಗೆ ಭೇಟಿಯಿತ್ತು ಗುರುಗಳ ಕೃಪೆಗೆ ಪಾತ್ರರಾಗಬೇಕು ಎಂದರು.

ಸಮಾಜದ ಹಿರಿಯ ವ್ಯಕ್ತಿ ಶ್ರೀ ಬಾಲಕೃಷ್ಣ ರಾವ್ ಪುತ್ತಿಗೆ ಮತ್ತು ಸಾಧಕ ನಟೇಶ್ ಸಿ. ಇವರನ್ನು ಪರಿಷತ್ತಿನ ವತಿಯಿಂದ ಸನ್ಮಾನಿಸಲಾಯಿತು. ಹಾಗೂ ಶೇ.85ಕ್ಕಿಂತ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿ ಪುರಸ್ಕರಿಸಲಾಯಿತು. ವೇದಿಕೆಯಲ್ಲಿ ಪರಿಷತ್ತಿನ ಗೌರವಾಧ್ಯಕ್ಷರಾದ ಶ್ರೀ ನಾರಾಯಣ ರಾವ್ ಮತ್ತು ಅತಿಥಿಯಾಗಿ ಶ್ರೀಮತಿ ಕವಿತಾ ರಾವ್ ಉಪಸ್ಥಿತರಿದ್ದರು. ಮುಂದಿನ ಸಾಲಿನ ಅಧ್ಯಕ್ಷರಾಗಿ ಶ್ರೀ ಚಂದ್ರಶೇಖರ ರಾವ್, ಡಿಜಿಎಮ್, ಕರ್ನಾಟಕ ಬ್ಯಾಂಕ್, ಪ್ರಧಾನ ಕಛೇರಿ, ಮಂಗಳೂರು ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಕಾರ್ಯದರ್ಶಿಯಾಗಿ ಶ್ರೀ ಅಲಂಗಾರು ಜಗದೀಶ ರಾವ್, ಕೋಶಾಧಿಕಾರಿಯಾಗಿ ಶ್ರೀ ವಾದಿರಾಜ ರಾವ್ ಇವರುಗಳು ಆಯ್ಕೆಯಾದರು.

ಕಾರ್ಯಕ್ರಮವನ್ನು ಪುತ್ತಿಗೆ ಶ್ರೀನಿವಾಸರಾವ್ ನಿರ್ವಹಿಸಿ, ಪ್ರಸಕ್ತ ಕಾರ್ಯದರ್ಶಿ ಶ್ರೀ ರಾಘವೇಂದ್ರ ಹೆಬ್ಬಾರ್ ವಂದನಾರ್ಪಣೆ ಗೈದರು.

# ಯಕ್ಷ ಮಂಜೂಷ : ಅಮೆರಿಕ ಪ್ರವಾಸ



ಯಕ್ಷ ಮಂಜೂಷ ತಂಡ ಅಮೆರಿಕದ ವರ್ಜೀನಿಯಾದಲ್ಲಿ ಮತ್ತು ಮೇರಿಲ್ಯಾಂಡ್‌ನ ಚಿನ್ಮಯ ಮಿಷನ್‌ನಲ್ಲಿ ಯಕ್ಷಗಾನ ತರಬೇತಿ ಮತ್ತು ಪ್ರದರ್ಶನಕ್ಕಾಗಿ ಅಮೆರಿಕ ಪ್ರವಾಸ ಕೈಗೊಳ್ಳಲಿದೆ.

ವರ್ಜೀನಿಯದಲ್ಲಿ 115 ಮತ್ತು ಚಿನ್ಮಯ ಮಿಶನ್‌ನಲ್ಲಿ 54 ಮಂದಿ ಮಕ್ಕಳಿಗೆ ಈ ತಂಡವು ತರಬೇತಿ ನೀಡಲಿದೆ. ಚಿನ್ಮಯ ಮಿಶನ್‌ನಲ್ಲಿ ತಂಡದ ಕೆಲವು ಸದಸ್ಯರು ತೆರಳಿ ಈಗಾಗಲೇ ತರಬೇತಿ ಆರಂಭಿಸಿದ್ದು ಜು. 18ರಂದು ತರಬೇತಿಯು ಕೊನೆಗೊಳ್ಳಲಿದೆ.

ಮೇರಿಲ್ಯಾಂಡ್, ವಾಶಿಂಗ್ಟನ್, ಎಡಿಸನ್, ರಿಚ್‌ಮಂಡ್, ಅಟ್ಲಾಂಟ, ಡಾಲ್ಲೆಸ್, ಆಸ್ಟಿನ್, ಸ್ಯಾನ್‌ಹೋಸ್, ಯುಎನ್‌ಸಿ, ಯುಎಂಸಿಯಲ್ಲಿ ತಂಡವು ಪ್ರದರ್ಶನ ನೀಡಿ, ಅಮೆರಿಕದಲ್ಲಿರುವ ಭಾರತೀಯ ರಾಯಭಾರ ಕಚೇರಿಯಲ್ಲಿಯೂ ಸೆ.6ರಂದು ಪ್ರದರ್ಶನ ನೀಡಲಿದೆ.

ತಂಡದಲ್ಲಿ ಭಾಗವತರಾಗಿ ಪಟ್ಲ ಸತೀಶ್ ಶೆಟ್ಟಿ, ಮದ್ದಳೆಗಾರರಾಗಿ ಪದ್ಮನಾಭ ಉಪಾಧ್ಯಾಯ, ಚೆಂಡೆವಾದಕರಾಗಿ ಬೆಳುವಾಯಿ ದೇವಾನಂದ ಭಟ್ ಭಾಗವಹಿಸುವುದಲ್ಲದೇ ಕಲಾವಿದರಾಗಿ ವಿದ್ಯಾ ಕೋಳ್ಯೂರು, ಹರಿನಾರಾಯಣ ಎಡನೀರು, ಮೋಹನ ಬೆಳ್ಳಿಪ್ಪಾಡಿ, ಪ್ರಶಾಂತ್ ಶೆಟ್ಟಿ ನೆಲ್ಯಾಡಿ, ರಾಕೇಶ್ ರೈ ಅಡ್ಕ, ಅರುಣ್, ಸರವು ಕೃಷ್ಣ ಭಟ್ ಇದ್ದಾರೆ. ಸೆ.11ರಂದು ತಂಡ ಸ್ವದೇಶಕ್ಕೆ ಪ್ರಯಾಣ ಬೆಳೆಸಲಿದೆ.

ವಿದೇಶಕ್ಕೆ ಪ್ರಯಾಣಿಸುವ ಈ ಎಲ್ಲಾ ಕಲಾವಿದರಿಗೆ ಗಣ್ಯರು ಶುಭ ಕೋರಿ ಬೀಳ್ಕೊಂಡರು.

# "ಯೌವನವೆಂದರೆ ಸ್ವರ್ಗ"

ಸಂಗ್ರಹ : **P. Mohandas Rao Mangalore.**

It is haven to be young ÖÖ
ಚಿಮ್ಮುವ ಚೈತನ್ಯ, ದಣಿವಿಲ್ಲದ ಉತ್ಸಾಹ, ಕೊನೆಯಿಲ್ಲದ ಕುತೂಹಲ, ಫಳಫಳ ಹೊಳೆಯುವ ಕಣ್ಣುಗಳು, ಆಹ್ ಮುದಿತನದಲ್ಲಿ ಹಿಂದಿರುಗಿ ನೋಡಿದಾಗ ಯೌವನದ ಸುಖದ ನೆನಪಾಗಿ ಮನಸ್ಸು ಮುದುಡುತ್ತದೆ.

ಜವಹರಲಾಲ್ ನೆಹರು ಒಮ್ಮೆ ಹೇಳಿದ್ದು : "ನಾನು ನೋಡುವ ಮಕ್ಕಳ ಕಣ್ಣುಗಳಲ್ಲಿ ಹೊಳಪಿದ್ದರೆ ನಮ್ಮ ದೇಶಕ್ಕೆ ಭವ್ಯ ಭವಿಷ್ಯವಿದೆ ಎಂದು ಅರ್ಥ. ಆ ಕಣ್ಣುಗಳು ಕಳಾಹೀನವಾಗಿದ್ದರೆ ನಮ್ಮ ಭವಿಷ್ಯ ಕತ್ತಲುಮಯ"

ಹೌದು! ಬೆಳೆಯುವ ಪೈರು ಮೊಳಕೆಯಲ್ಲೇ ಕಾಣಿಸಿಕೊಂಡಂತೆ

ಬೆಳೆಯುವ ಯುವಜನತೆ ವಿದ್ಯಾವಂತರಾಗಿ, ವಿವೇಕಿಗಳಾಗಿ, ನಿರಂಕುಶಮತಿಗಳಾಗಿ, ದೇಶ ಭಕ್ತರಾಗಿ ಬೆಳೆದರೆ ವಿವೇಚನೆ, ವಿಮರ್ಶಾಶಕ್ತಿ ಬೆಳೆಸಿಕೊಂಡಾಗ ವ್ಯಕ್ತಿ "ವಿಕಸಿತ ವ್ಯಕ್ತಿ" (evolved individual) ಆಗುತ್ತಾನೆ. ಆಗ ಯಾವ ಹೊರಗಿನ ದುಷ್ಟ ಶಕ್ತಿಯೂ ಅವನನ್ನು ಶೋಷಿಸಿ ಬಗ್ಗಿಸಲು ಸಾಧ್ಯವಾಗದು. ಈ ಗುಣಗಳು ಹೊರಗಿನಿಂದ ಬರುವ ಕಟ್ಟು ಪಾಡಿನಿಂದಲ್ಲ. ಆಂತರಿಕ ಶಕ್ತಿ ವರ್ಧನೆಯಿಂದ ಅದನ್ನು 'SELFñ IMPOSED DISCIPLINEí ಎನ್ನುವುದು. ಅದಿಲ್ಲವಾದಲ್ಲಿ ಬೇರೆ ಯಾರದೋ ಬಿಗಿ ಮುಷ್ಠಿಯ ನಿಯಂತ್ರಣದಲ್ಲಿರುವ ಆಟದ ಕಾಯಿಗಳಾಗುತ್ತೇವೆ ! ಅವರಾಡಿಸಿದಂತೆ ಆಟವಾಡುವ ಗೊಂಬೆಗಳಾಗುತ್ತೇವೆ !

ಹಾಗಾದಾಗ ವ್ಯಕ್ತಿಗಳು Billiard balls (ಆಟದ ಚೆಂಡುಗಳು) ಆಗಿ ಆಡುವ ಆಟದಲ್ಲಿ ಒಬ್ಬರಿಗೊಬ್ಬರು ಢಿಕ್ಕಿ ಹೊಡೆಯುತ್ತಾ ಬಾಳುವವರಾಗುತ್ತೇವೆ. ಪುಸ್ತಕ ಓದಿನ ಮಾತ್ರದಿಂದಲೆ ವಿವೇಕಿಗಳಾಗಲು ಸಾಧ್ಯವೆ? ಓದಿ ಓದಿ ಕೂಚಂಭಟ್ಟನಾದರೆ ಏನು ಬಂತು? ಕಬೀರ್ ದಾಸ್‌ನ ಒಂದು ಮಾತು ಹೀಗಿದೆ :–

*ಓದಿ ಓದಿ ಬರೆದು ಬರೆದು ಅವರ ಹೃದಯ ಕಲ್ಲಾಯಿತೇ !*

*ಪ್ರೇಮದ ಹನಿಯೊಂದು ಅವರ ಹೃದಯದಲ್ಲೇಕೆ ಒಸರಲಿಲ್ಲ.!*

ಸ್ವಾಮಿ ವಿವೇಕಾನಂದರೂ ಕೂಡಾ ಈ ವಿಷಯದಲ್ಲಿ ತುಂಬ ಖಾರವಾದ ಮಾತನ್ನಾಡಿದ್ದಾರೆ. ಪುಸ್ತಕದ ಹುಳುವಾಗಿ ಪದವಿಗಳನ್ನು ಪಡೆದೂ 'ಮನುಷ್ಯ'ನಾಗಿ ಬದುಕದಿದ್ದಲ್ಲಿ ಏನು ಪ್ರಯೋಜನ?

Is there not water enough in the sea to drown you, your books, Univesity degrees ಎಂದು ಗುಡುಗಿದ್ದಾರೆ.

ನಾವು ಇಂದು ಸಮಸ್ಯೆಗಳ ಯುಗದಲ್ಲಿದ್ದೇವೆ. ಒಂದಾದ ಮೇಲೆ ಇನ್ನೊಂದರಂತೆ ಸಮಸ್ಯೆಗಳು ಕಾಡುತ್ತಲೇ ಇವೆ. ಅಯ್ಯೋ ಬಿಡಿ ಇವೆಲ್ಲಾ ಇದ್ದದ್ದೆ ಎಂದು ಕೈ ಕಟ್ಟಿ ಕೂಡುವ ಹಾಗಿಲ್ಲ. ಹಾಗಾದರೆ ಬದಲಾವಣೆಗಳ ಚಕ್ರದಡಿ ಸಿಕ್ಕು ನಾವು ನುಚ್ಚು ನೂರಾಗುತ್ತೇವೆ. ನಮ್ಮ ಪಾಡಿಗೆ ನಾವು ಭವಿಷ್ಯವನ್ನು ಕಾದು ನೋಡುತ್ತ ಇರುವ ಕಾಲ ಇದಲ್ಲ..... ಒಬ್ಬ ಚಿಂತಕನ ಪ್ರಕಾರ The future has already come ! turbulant environmentನಲ್ಲಿ ನಾವು ಬದುಕಿದ್ದೇವೆ.

ಒಳಿತಿದೆ–ಕೆಡುಕಿದೆ. ನಾಡಿನ ಜೊತೆ ಕಾಡಿದೆ. ಪ್ರೀತಿಯ ಜೊತೆ ದ್ವೇಷವೂ ಇದೆ.... ಆಯ್ಕೆ ನಮ್ಮದು, ನಮ್ಮದಾಗ ಬೇಕು. ಕೇವಲ ಗದ್ದಲ–ಗಲಾಟೆ, ದ್ವೇಷಾಸೂಯೆಗಳ, ಹಿಂಸೆ–ಪ್ರತೀಕಾರಗಳಲ್ಲಿ ನಮ್ಮ ಬಾಳು ಸವೆದು ಹೋಗಬಾರದು.

ವ್ಯಕ್ತಿಯೊಬ್ಬ ಮಡಕೆ ಮಾಡುವ ಕುಂಬಾರನ ತಿರುಗುವ ಗಾಲಿಯ ಮೇಲೆ ಸುಮ್ಮಗೆ–ತೆಪ್ಪಗೆ ಕೂಡುವ ಜೇಡಿ ಮಣ್ಣಾಗಬಾರದು. ಕುಂಬಾರನ ಕೈಯ ಕಲಾತ್ಮಕತೆಗೆ ಸಿಕ್ಕು ಸುಂದರವಾದ ಕಲಾಕೃತಿಯಾಗುವ ಹಾಗೆ ಬದುಕಿನ ಏರು–ಪೇರುಗಳಿಗೆ ಎದೆಯೊಡ್ಡಿ ನಿಂತು ಸೃಜನಶೀಲನಾಗಬೇಕು ಎಂಬುದು ಪ್ರಾಜ್ಞರ ಮಾತು.

ಉಡಿಯಲ್ಲಿ ಗಮ ಗಮಿಸುವ ಮಲ್ಲಿಗೆ ಕಟ್ಟಿಕೊಳ್ಳುವುದಲ್ಲದೆ, ಉಡಿಯಲ್ಲಿ ಕೆಂಡ ದುಂಡೆ ಇಟ್ಟುಕೊಂಡರೆ ಅದು ನಮ್ಮನ್ನು ಸುಡದೆ ಇರುವುದುಂಟೇ? ಆದ್ದರಿಂದ ನಮ್ಮ ಮನೋಭಾವದಲ್ಲಿ (ATTITUDES) ಸಮಾಜದ ಸೌಖ್ಯ ಸಮೃದ್ಧಿಗೆ ಬೇಕಾಗುವಂತಹ ಬದಲಾವಣೆಯನ್ನು ಮಾಡಿಕೊಳ್ಳಬೇಕು.

ನಾನು ನನ್ನದು, ನನ್ನ ಕೆಲಸ–ವರಮಾನ–ಖರ್ಚು, ತನ್ಮೂಲಕ ಸಿಗುವ ಅಲ್ಪ ಸುಖದಿಂದ ಬದುಕಿದರಷ್ಟೆ ಸಾಕೆ?. ಸಾಮಾಜಿಕ ಪ್ರಜ್ಞೆ–ಕಾಳಜಿ–ಜವಾಬ್ದಾರಿ ಬೇಡವೆ? ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಈ ಸಾಲುಗಳು ಎಷ್ಟು ಅರ್ಥಪೂರ್ಣ?

**ಶಿವರಾಮ**

*ನಿನ್ನೊಳಗ ಪಾರೋತಿ ನಿನ್ನೊಳಗೆ ಪರಮೇಶಿ*
*ನಿನ್ನೊಳಗ ಮಾಲಕುಮಿ ಗೌರಿಗಂಗಿ*
*ಬ್ರಹ್ಮ ತತ್ವವು ನೀನೆ ರಾಮ ಕೃಷ್ಣನು ನೀನೆ*
*ನಿನ್ನೊಳಗ ಶಿವರಾಮ ಮುದ್ದುಕಂದ.*

*'ಧರೆಯ ಬದುಕೇನು ಗುರಿಯೇನು ಫಲವೇನು?*
ಬರಿ ಬಳಸು ಬಡಿದಾಟ ಬರಿ ಪರಿಭ್ರಮಣೆ
ತಿರು ತಿರುಗಿ ಹೊಟ್ಟೆ ಹೊರಕೊಂಬ
ಮೃಗ ಖಗಕ್ಕಿಂತ ನರರು ಸಾಧಿಪುದೇನು?
ಮಂಕುತಿಮ್ಮ॥

ನಮ್ಮ ಸುತ್ತಲೂ ಇವತ್ತು ಕಾಣುತ್ತಿರುವುದೇನು?

ದೊಡ್ಡ ದೊಡ್ಡ ಗಗನ ಚುಂಬಿ ಕಟ್ಟಡಗಳಿವೆ. ಆದರೆ ಬುದ್ಧಿ–ವಿವೇಕ ಮೊಟಕಾಗಿದೆ. ವಿಶಾಲವಾದ ರಸ್ತೆಗಳಿವೆ. ಮನಸ್ಸು ಕಿರಿದಾಗಿದೆ. ಖರ್ಚು ಹೆಚ್ಚಾಗಿದೆ. ನೆಮ್ಮದಿ ಇಲ್ಲವಾಗಿದೆ. ಅನುಕೂಲಗಳು ಹೆಚ್ಚಾಗಿವೆ. ತಿಳುವಳಿಕೆ ಕಮ್ಮಿಯಾಗಿದೆ.

ಅದೇನೆ ಇರಲಿ. ಅಪಾಯಕಾರಿ ಸನ್ನಿವೇಶವೆಂದರೆ ನಮ್ಮ ಯುವ ಜನಾಂಗದಲ್ಲಿ ಕಾಣುವ ನಿರಾಶಾಭಾವ... ಛೆ... ಯಾವುದಕ್ಕೂ ಹೆದರಿ ಮುದುರಿ ಕೂರಬಾರದು. Life is an adventure. ಸಾಹಸ ಪ್ರೀಯತೆ, ಪ್ರಯತ್ನ ಶೀಲತೆ, ಶೋಧಕ ಬುದ್ಧಿ, ಸೋಲಿಗೆ ಜಗ್ಗದ ಕುಗ್ಗದ ಎದೆಗಾರಿಕೆ ಸಾಧಕನ ಗುಣ–ಇವು ನಮ್ಮ ಯುವಜನರ ವಜ್ರ ಕವಚವಾಗಲಿ.

### ಬೆಳಗು

ಗಾಳಿ ಮೆಲ್ಲಗೆ ಬೀಸಿತು
ಕೋಳಿ ಎಲ್ಲೋ ಕೂಗಿತು
ರವಿಕಿರಣ ಹರಡಿತು
ಕವಿದ ಮಂಜು ಕರಗಿತು
ಕಂಪು ಸೂಸುವ ಬಿರುಮುಗುಳು
ಇಂಪು ಸುರಿಸುವ ಗಿಳಿಗಳು
ಸೊಂಪಾದ ಸೋಗೆಯ ನರ್ತನ
ತಂಪಾದ ಸಲಿಲದ ತೊಂ ತನನ
ಮುತ್ತಿಡುವ ಇಬ್ಬನಿಯ ಉನ್ಮಾದ
ಮತ್ತೇರಿ ಜಿಗಿಯುವ ಚಿಗುರಂದ
ಸುತ್ತಲೂ ಸುಳಿವ ಭೃಂಗಗಳ ವೃಂದ
ನಲಿದಾಡಿ ಹೀರುವುದು ಮಕರಂಧ
ಆಹಾ ನೊಡೊಮ್ಮೆ ಮುಂಜಾನೆ ಸೊಬಗು
ಆಹಾ ಬೆರಗಾಗಿಹುದು ಮೂಜಗ
ಆಕಳಿಕೆ ಮೈ ಮುರಿಕೆ ತೊರೆದು ನೀನೀಗ
ಮುದದಿಂದ ಹಾಡು ಉದಯರಾಗ

**– ಸಾವಿತ್ರಿ ಮನೋಹರ್**

## ಶುಭಾಶಯಗಳು



ಕಲಾವಿದರ ತಂಡದೊಂದಿಗೆ ಸಹಕಲಾವಿದರಾಗಿ ವಿದೇಶಕ್ಕೆ ತೆರಳುತ್ತಿರುವ

ನಮ್ಮ ಸಮಾಜದ ಸಾಮಾಜಿಕ ಕಾರ್ಯಕರ್ತ, ಯಕ್ಷಗಾನ ಕಲಾವಿದ,
ಪರಿಣತ ಛಾಯಾಗ್ರಾಹಕ, ಚತುರ ಸಂಘಟಕ

**ಬೆಳುವಾಯಿ ದೇವಾನಂದ ಭಟ್**

ಇವರಿಗೆ ಶುಭ ಹಾರೈಸುವ,

**ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು**

ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ
ಹಾಗೂ
ಶ್ರೀಶಾರದಾ ಬಳಗ, ಕುಂಜಿಬೆಟ್ಟು, ಉಡುಪಿ.

## ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಂಘದ ಮಹಾಸಭೆ



ಸ್ಥಾನಿಕ ಬ್ರಾಹ್ಮಣ ಮಹಾಸಭಾ ವತಿಯಿಂದ ಇತ್ತೀಚೆಗೆ ಎರ್ಮಾಳಿನ ಶ್ರೀ ರಾಜರಾಜೇಶ್ವರಿ ಸಭಾಭವನದಲ್ಲಿ ಜರಗಿದ್ದ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ 16 ವಿದ್ಯಾರ್ಥಿಗಳಿಗೆ 90,000ರೂ. ಗಳ ಪ್ರತಿಭಾ ಪುರಸ್ಕಾರ ಹಾಗೂ ಪಾಕತಜ್ಞ ಮುಂಡ್ಕೂರು ಯೋಗೀಶ ರಾಯರಿಗೆ ಸಾಧಕ ಸಮ್ಮಾನದೊಂದಿಗೆ ಗೌರವಿಸಲಾಯಿತು. ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಂ. ಕೆ. ಮೋಹನ ರಾವ್, ಗೌರವಾಧ್ಯಕ್ಷ ಪಿ. ಬಿ. ವಾಸುದೇವ ರಾವ್, ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ ಕಾರ್ಯದರ್ಶಿ ಕರುಣಾಕರ ಬೆಳ್ಳೆ, ಉಡುಪಿ ಡಾ| ವೈ. ಸುದರ್ಶನ್ ರಾವ್, ಉಡುಪಿ ಸಂಘದ ಅಧ್ಯಕ್ಷ ಪ್ರಪುಲ್ಲಚಂದ್ರ ರಾವ್, ಕೆನರಾ ಬ್ಯಾಂಕ್ ಪೆರ್ಮುದೆಯ ಮುಖ್ಯ ಪ್ರಬಂಧಕಿ ಕವಿತಾ ಚಂದ್ರಶೇಖರ ರಾವ್ ವೇದಿಕೆಯಲ್ಲಿದ್ದರು. ವೈ. ಎಸ್. ಸುದರ್ಶನ ರಾವ್ ಸಂಯೋಜಿಸಿದ ಈ ಕಾರ್ಯಕ್ರಮವನ್ನು ಧರ್ಮಪ್ರಭಾ ವಿದ್ಯಾರಣ್ಯ ರಾವ್ ನಿರೂಪಿಸಿ, ವಂದಿಸಿದರು. ಮಹಿಳಾ ವೇದಿಕೆಯ ಸದಸ್ಯೆಯರು ಹಾಗೂ ಮಕ್ಕಳಿಂದ ನೃತ್ಯ ವೈವಿಧ್ಯ ಕಾರ್ಯಕ್ರಮವು ಜರಗಿತು.

### ಶುಭಜನನ

ಕೊಲ್ಲೂರಿನ ಶ್ರೀ ನವೀನ್‌ಕುಮಾರ್ ಹಾಗೂ ಶ್ರೀಮತಿ ಮಮತಾ ಕುಮಾರಿ ದಂಪತಿಗಳಿಗೆ ದಿನಾಂಕ 19–09–2014ರಂದು ಗಂಡು ಶಿಶುವಿನ ಜನನ

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),** ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2014-2015ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಅರ್ಜಿ ಫಾರಂನ್ನು ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2014ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

---

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),** ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸ್ತವ್ಯದಲ್ಲಿರುವ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ್‍ಯಾಂಕ್ ವಿಜೇತರಾದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ತಾ.30-09-2014ರ ಒಳಗೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು-576102, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**-ಕಾರ್ಯದರ್ಶಿ**

---

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),** ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

**ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2014ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102.**

---

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),** ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಉದಯಚಂದ್ರ ಪ್ರತಿಭಾ ಪುರಸ್ಕಾರ 2013-14

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2013-14ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2014ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%*ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ್‍ಯಾಂಕ್‌ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು ''ಸಂಚಾಲಕರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102'' ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**- ಸಂಚಾಲಕರು, ಯುವವೇದಿಕೆ.**

*(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ್‍ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)


## ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು
ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

| | |
|---|---|
| #1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010 | ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |

**ಮೊಬೈಲ್- 9886629697, 9986119865**

## ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



**ಎಮ್. ದೇವಾನಂದ್ ಭಟ್** Cell : 9845644556, 9483913344

## ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161, 97417 85551

## ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

''ಶ್ರೀರಂಗ'', ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



## RAJESH POWER PRESS

**PRINTERS & PUBLISHERS**

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org